ಶ್ರೀ ಆರ್.ವಿ.ದೇಶಪಾಂಡೆ: ನಾವು cabinet sub-committee ಮಾಡಿದ್ದೇವೆ, ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಹೇಳಿದ್ದೇನೆ.

ಅಧ್ಯಕ್ಷರು: Ok. ನಾಳೆ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ನಿಲುವಳಿ ಸೂಚನೆಯ ಅಗತ್ಯವಿಲ್ಲ. ಇನ್ನು ಮಾನ್ಯ ಕುಮಾರಸ್ವಾಮಿಯವರೆ ಮಾತನಾಡಿ.

(ಗೊಂದಲ)

ಶ್ರೀ ಶಿವರಾಂ ಅರಬೈಲ್ ಹೆಬ್ಬಾರ್: ಕಾರವಾರದಲ್ಲಿ ಸಭೆ ಆಯಿತು. ಇಡೀ ಜಿಲ್ಲೆಯಲ್ಲಿ ಈ ವರದಿಯ ಬಗ್ಗೆ ಪ್ರಸ್ತಾಪ ಆಗಿತ್ತು. ಅವತ್ತು ಕಾಗೇರಿಯವರು ಬರಲಿಲ್ಲ. ನಾವು ಅದೇ ಪ್ರದೇಶದಿಂದ ಬಂದವರು. 90% ರಷ್ಟು ಕಸ್ತೂರಿ ರಂಗನ್ ವರದಿಯಿಂದ ತೊಂದರೆಗೊಳಗಾಗತಕ್ಕವರು ನಾವು. ಅವತ್ತು ಅಲ್ಲಿ ಏನೂ ಹೇಳದೆ.. ಇವತ್ತು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಚರ್ಚೆಗೆ ನನಗೆ ಅವಕಾಶ ಕೊಟ್ಟರೆ ಹೇಳಿ ನಾವು ಹೇಳುತ್ತೇವೆ.

ಅಧ್ಯಕ್ಷರು: ಇಲ್ಲ. ಬೇಡ.

ನಿಯಮ 69ರಡಿಯಲ್ಲಿ ಚರ್ಚೆ

7) ವಿಷಯ: ಕಬ್ಬು ಬೆಳೆಗಾರರಿಗೆ ಬೆಲೆ ನಿಗದಿ ಮಾಡಿರುವ ಬಗ್ಗೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸದಿಂದ ಸದನದಲ್ಲಿ ನಮ್ಮ ಬಿ.ಜೆ.ಪಿ. ಸ್ನೇಹಿತರು ಕಬ್ಬಿನ ಬೆಲೆಯ ಜೊತೆಯಲ್ಲಿ ಭತ್ತ ಮತ್ತು ಜೋಳ, ಟೊಮೊಟೊ ಬೆಳೆಯನ್ನು ಸೇರಿಸಿಕೊಂಡು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು. ಇವತ್ತು ಪ್ರಮುಖವಾಗಿ ಕಬ್ಬು ಬೆಳೆಗಾರರ ಕಳೆದ ವರ್ಷದ ಬಾಕಿ ಹಣವನ್ನು ಕಾರ್ಖಾನೆ ಮಾಲೀಕರು ಕೊಡದೇ

ಇರುವ ಹಿನ್ನೆಲೆಯಲ್ಲಿ ಬೆಳಗಾವಿಯ ಅಧಿವೇಶನ ನಿನ್ನೆ ದಿವಸ ಏನು ಪ್ರಾರಂಭವಾಗಿದೆ. ಸದನದ ಒಳಗೆ ಮತ್ತು ಹೊರಗೆ ದೊಡ್ಡ ದೊಡ್ಡ ಮಟ್ಟದ ರೈತರ ಪರವಾಗಿ ಧ್ವನಿ ಎತ್ತಿ ರೈತರನ್ನು ಉಳಿಸತಕ್ಕಂಥವರು ಎನ್ನುವ ಭಾವನೆಯನ್ನು ಮೂಡಿಸುವುದಕ್ಕೆ ಒಂದು ವರ್ಗದವರು ಪ್ರಯತ್ನ ಪಡುತ್ತಿದ್ದಾರೆ. ಈ ಸದನದಲ್ಲಿ ಕಳೆದ ವಿಧಾನಸಭೆಯ ಕಲಾಪಗಳು ಏನು ನಡೆಯಿತು, ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಏನು ನಡೆಯಿತು, ಅವತ್ತಿನ ಸದನದ ಕಲಾಪದಲ್ಲೂ ಮೊದಲನೇ ದಿವಸದಲ್ಲಿ ಕಬ್ಬುಗಾರರ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅವತ್ತು ಸಹ ನಾವು ನಿಲುವಳಿ ಸೂಚನೆಯನ್ನು ತಂದಾಗ, ನಮ್ಮ ಬಿ.ಜೆ.ಪಿ. ಸ್ನೇಹಿತರು ಮತ್ತು ಅಧಿಕೃತ ವಿರೋಧಪಕ್ಷದಲ್ಲಿ ನಾನು ಅಲ್ಲಿದ್ದೆ. ಆಗ ತಂದಂಥ ಸನ್ನಿವೇಶದಲ್ಲೂ ಅವತ್ತು ಈ ಒಂದು ನಿಲುವಳಿ ಸೂಚನೆಯನ್ನು ಪ್ರಶ್ನೋತ್ತರ ಕಾಲವನ್ನು ಬದಿಗಿರಿಸಿ ಈ ವಿಷಯವನ್ನು ತೆಗೆದುಕೊಳ್ಳಬೇಕೆಂದು ಸುದೀರ್ಘವಾಗಿ ಎರಡು ಗಂಟೆಗಳ ಚರ್ಚೆಯಾಯಿತು. ನಿನ್ನೆಯೂ ಸಹ ಸದನವನ್ನು ಮುಂದೂಡುವ ಪರಿಸ್ಥಿತಿ ಬಂತು. ಅದು ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕಿ ಎಂದು ಆಯಿತು. ನಾನು ನಿನ್ನೆಯಿಂದ ಇವೆಲ್ಲವನ್ನೂ ಗಮನಿಸುತ್ತಿದ್ದೇನೆ. ಈ ಒಂದು ಕಬ್ಬು ಬೆಳೆಗಾರರ ಶ್ರಮಕ್ಕೆ ಬೆಲೆಯನ್ನು ಕೊಡುವಂಥದ್ದರಲ್ಲಿ, ಈ ಸಮಸ್ಯೆ ನಿನ್ನೆ, ಮೊನ್ನೆಯಿಂದ ಪ್ರಾರಂಭವಾಗಿರುವಂಥದ್ದಲ್ಲ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಕಬ್ಬು ಬೆಳೆಗಾರರು ಕಬ್ಬು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ ದಿವಸದಿಂದಲೇ ಇದು ಪ್ರಾರಂಭವಾಗಿದೆ. ಅದು ಕಬ್ಬು ಬೆಳೆ ಅಷ್ಟೇ ಅಲ್ಲ, ಈ ದೇಶದ ರೈತನನ್ನು ಅನ್ನದಾತ ಎಂದು ಏನು ಕರೆಯುತ್ತೇವೆ, ಅವರು ಬೆಳೆಯುವಂಥ ಪ್ರತಿಯೊಂದು ಬೆಳೆಗೂ ಅವನು ಬೆಲೆಯನ್ನು ಪಡೆಯಬೇಕಾದರೆ ಶ್ರಮ ಪಟ್ಟೇ ಪಡೆಯಬೇಕಾದಂಥ ಒಂದು ಅನಿವಾರ್ಯ ಪರಿಸ್ಥಿತಿಗಳು ಇವತ್ತು ದೇಶದಲ್ಲಿ ನಾವು ಕಾಣುತ್ತಿದ್ದೇವೆ. ಕಳೆದ ಬೆಳಗಾವಿಯ ಅಧಿವೇಶನದಲ್ಲೇ ಸುಮಾರು 2–3 ದಿವಸಗಳ ಕಾಲ ಚರ್ಚೆ ನಡೆಯಿತು. ಅದು ಬೆಳೆಗಾರರಿಗೆ ಬೆಲೆಯನ್ನು ನಿಗದಿ ಮಾಡಿರುವಂಥ ವಿಷಯದಲ್ಲಿ ಏನು

ಚರ್ಚೆ ನಡೆಯಿತು, 2013ರ ಮಾರ್ಚ್ ತಿಂಗಳಲ್ಲಿ ಇರಬಹುದು, ಆಗ ಕಬ್ಬು ಬೆಳೆಗೆ ಬೆಲೆಯನ್ನು ನಿಗದಿ ಮಾಡುವಂಥ ಮತ್ತು ಸಾಗಣೆ ಮಾಡುವಂಥ ವಿಷಯದಲ್ಲಿ ಎಸ್.ಎ.ಪಿ. ಕಾನೂನನ್ನು ತರುವಂಥ ಅಧಿಸೂಚನೆ ಜಾರಿಗೆ ಬಂದಂಥದ್ದು ಏನು ಇದೆ. ಕಳೆದ ವರ್ಷ ಮೇ ತಿಂಗಳ ಎಂಟನೇ ತಾರೀಖು ಸಿದ್ದರಾಮಯ್ಯನವರು ಕಾಂಗ್ರೆಸ್ ನೇತೃತ್ವದ ಸರ್ಕಾರದ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದರು. ನಾನು ಆಗಸ್ಟ್ 20ನೇ ತಾರೀಖು ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದೆ. ಕಬ್ಬು ಬೆಳೆಗಾರರಿಗೆ ನಿಗದಿ ಮಾಡಿದ 2,500 ರೂಪಾಯಿಗಳನ್ನು ಕೊಡಲಿಲ್ಲ ಎಂದು ಹೊರಗಡೆ ಗಲಾಟೆಯೇನು ನಡೆಯುತ್ತಿದೆ, ಅದನ್ನು ಕೊಡಿಸುವಂಥಾದ್ದರಲ್ಲಿ ಈ ಸರ್ಕಾರ ವಿಫಲವಾಗಿದೆ, ಸರ್ಕಾರ ಸಕ್ಕರೆ ಕಾರ್ಖಾನೆಗಳ ಮಾಲೀಕರ ಬಗ್ಗೆ ಮೃದು ಧೋರಣೆಯನ್ನು ಅನುಸರಿಸುತ್ತದೆ ಎಂದು ಇಲ್ಲಿ ನಡೆದ ಚರ್ಚೆ ಮತ್ತು ನಿನ್ನೆ ಹೊರಗಡೆ ಭಾಷಣ ಮಾಡಿದ್ದನ್ನೂ ನಾನು ಕೇಳಿದ್ದೇನೆ. ಈ ಸರ್ಕಾರದವರು ಇನ್ನೂ ನಾವು ಮೂರು ವರ್ಷ ಇರುತ್ತೇವೆಂದು ತಿಳಿದುಕೊಂಡಿದ್ದಾರೆ, ಮೂರ್‍ನಾಲ್ಕು ತಿಂಗಳಿಗೇ ಇದನ್ನು ಕಿತ್ತು ಒಗೆಯುಂಥ ದಿನ ಬರುತ್ತದೆ ಎಂದು ಭಾಷಣ ಮಾಡಿದ್ದನ್ನೂ ಕೇಳಿದ್ದೇನೆ. ಇಲ್ಲಿ ಕಬ್ಬು ಬೆಳೆಗಾರರಿಗೆ ಕಾರ್ಖಾನೆಗಳ ಮಾಲೀಕರು ಹಣವನ್ನು ಕೊಡುವ ವಿಷಯದಲ್ಲಿ ಉಂಟಾಗಿರುವ ಸಮಸ್ಯೆ ಕೇವಲ ನಿನ್ನೆಯಿಂದ ಪ್ರಾರಂಭವಾಗಿಲ್ಲ. ಕಳೆದ ವರ್ಷ ಮೇ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದಂಥ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರಕ್ಕೆ ನಾನು ಆಗಸ್ಟ್ 22, 2013 ರಂದು ಒಂದು ಪತ್ರ ಬರೆದಿದ್ದೇನೆ 3–4 ವರ್ಷಗಳ ಹಿಂದೆ ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಿರುವ ಕಬ್ಬು ಬೆಳೆಗಾರರಿಗೆ ಕಾರ್ಖಾನೆ ಮಾಲೀಕರು ಸುಮಾರು 1,700 ಕೋಟಿ ರೂಪಾಯಿಗಳಷ್ಟು ಹಣವನ್ನು 3–4 ವರ್ಷಗಳಿಂದಲೂ ಕೊಟ್ಟಿಲ್ಲವೆಂದು ಈ ಪತ್ರದಲ್ಲಿ ತಿಳಿಸಿದ್ದೇನೆ. ಇವತ್ತು ಕಬ್ಬು ಬೆಳೆಗಾರರಿಗೆ ಹಣ ಕೊಡಿಸಲು ಕಾಂಪಿಟೇಷನ್ ನಡೆಯುತ್ತಿದೆ, ಕಬ್ಬು ಬೆಳೆಗಾರರ ವಿಷಯವನ್ನು ಕೆಲವರು ಗುತ್ತಿಗೆ ತೆಗೆದುಕೊಂಡಿರುವ ವಿಷಯವನ್ನು ನಾನು ಇಲ್ಲಿ ಚರ್ಚೆ ಮಾಡಲು ಹೋಗುವುದಿಲ್ಲ. ಎಲ್ಲರಿಗೂ ರೈತರ ಬಗ್ಗೆ ಕನ್ಸರ್ನ್ ಇದೆ, ಅದನ್ನು ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ನಾವೆಲ್ಲರೂ ರೈತ

ಕುಟುಂಬಗಳಿಂದ ಬಂದಿರುವಂಥವರೇ. ನಾನು ನೆನಪಿಸಿಕೊಡಲು ಬಯಸುತ್ತೇನೆ, ಬೆಳಗಾವಿಯಲ್ಲಿ ನಡೆದ ಕಳೆದ ಅಧಿವೇಶನದಲ್ಲಿ ಕೇವಲ ಕಬ್ಬು ಬೆಳೆಗಾರರ ಸಮಸ್ಯೆಯ ಬಗ್ಗೆ ಅಷ್ಟೇ ಅಲ್ಲ, ದ್ರಾಕ್ಷಿ ಮತ್ತು ದಾಳಿಂಬೆಯನ್ನು ಬೆಳೆದಿರುವಂಥ ಉತ್ತರ ಕರ್ನಾಟಕ ಭಾಗದ ರೈತರು ಎದುರಿಸುತ್ತಿರುವಂಥ ರೈತರ ಸಮಸ್ಯೆಯ ಬಗ್ಗೆಯೂ ಚರ್ಚೆಯಾಯಿತು. ದ್ರಾಕ್ಷಿ ಮತ್ತು ದಾಳಿಂಬೆಯನ್ನು ಬೆಳೆಯುವಂಥ ಹೆಚ್ಚಿನ ರೈತ ಕುಟುಂಬಗಳಿರುವುದು ಬಿಜಾಪುರ, ಬಾಗಲಕೋಟೆ, ಗುಲ್ಬರ್ಗ, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ. ಆವತ್ತು ನಡೆದ ಚರ್ಚೆಯಲ್ಲಿ ನಾನು ಸುದೀರ್ಘವಾಗಿ ಹಲವಾರು ವಿಷಯಗಳನ್ನು ಈ ಸದನ ಮುಂದೆ ಇಟ್ಟಿದ್ದೆ. ದ್ರಾಕ್ಷಿ ಬೆಳೆಯುವಂಥ ಬೆಳೆಗಾರರು 2-3 ವರ್ಷಗಳ ಅವಧಿಯಲ್ಲಿ ಹೆಚ್ಚಿನ ಹಣವನ್ನು ಸಂಪಾದನೆ ಮಾಡಿದರು. ನಂತರದ ದಿನಗಳಲ್ಲಿ ಅವರಿಗೆ ಅಷ್ಟು ಹಣ ಬರಲಿಲ್ಲ. ಅದೆಲ್ಲವನ್ನೂ ನಾನು ಈ ಸದನದಲ್ಲಿ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದೆ. ಆವತ್ತಿನ ದಿನ ನಾನು ನಮ್ಮ ಮುಖ್ಯಮಂತ್ರಿಗಳಿಗೆ ಹೇಳಿದೆ, ದ್ರಾಕ್ಷಿ ಬೆಳೆಗಾರರು ರಾಷ್ಟ್ರೀಕೃತ ಮತ್ತು ಸಹಕಾರಿ ಬ್ಯಾಂಕುಗಳಿಂದ ಪಡೆದ ಸಾಲದ ಮೇಲಿನ ಬಡ್ಡಿ 515 ಕೋಟಿ ರೂಪಾಯಿಗಳಷ್ಟಿತ್ತು, ಅದರ ಜೊತೆಗೆ ದಾಳಿಂಬೆ ಬೆಳೆದಂಥ ಬೆಳೆಗಾರರರು ಕೊಪ್ಪಳ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ಮಾಡಿದರು ಮತ್ತು ಕೊಪ್ಪಳದ ಬೆಳೆಗಾರರು ಬೆಂಗಳೂರಿನ ಬನಪ್ಪ ಪಾರ್ಕ್‌ನಲ್ಲೂ ಬಂದು ಧರಣಿ ನಡೆಸಿದರು. ಆ ಘಟನೆಗಳನ್ನೆಲ್ಲ ನಾನು ಮರೆತಿಲ್ಲ. ಸುಮಾರು 160-180 ಕೋಟಿ ರೂಪಾಯಿಗಳಷ್ಟು ಸಾಲದ ಮೇಲಿನ ಬಡ್ಡಿಯ ಹೊರೆ ದಾಳಿಂಬೆ ಬೆಳೆಗಾರರ ಮೇಲೂ ಇದೆ. ಆವತ್ತು ನಾನು ಈ ಸದನದಲ್ಲಿ ಮಾತನಾಡುವಾಗ ಈ ಸರ್ಕಾರಕ್ಕೆ ಮನವಿ ಮಾಡಿದ್ದೆ. ಕೇಂದ್ರದ ಹಣಕಾಸು ಸಚಿವರಿಗೆ ನಾನು ಪತ್ರ ಬರೆದಿದ್ದೇನೆ, ಅವರು ಒಂದು ರೀತಿಯಲ್ಲಿ ಸಹಾಯ ಮಾಡಲು ಒಪ್ಪಿಗೆ ಕೊಟ್ಟಿದ್ದಾರೆ ಎಂದು ಇವರು ಹೇಳಿದರು. ನಾನು ಈ ಸದನಕ್ಕೆ ಬರುವ ಮೊದಲು ನಿನ್ನೆಯ ದಿನ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ದೂರವಾಣಿ ಮುಖಾಂತರ ಕೇಳಿದೆ, ಕಳೆದ ಒಂದೂವರೆ ವರ್ಷದಲ್ಲಿ ಕೇಂದ್ರ ಸರ್ಕಾರದವರು ನಿಮಗೇನಾದರೂ ನೆರವನ್ನು ಕೊಟ್ಟಿದ್ದಾರೆಯೇ, 550 ಕೋಟಿ

ಮತ್ತು 160 ಕೋಟಿ ರೂಪಾಯಿಗಳ ಬಡ್ಡಿಯನ್ನು ಉಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನಿಮಗೆ ನೆರವು ದೊರೆತಿದೆಯೇ ಎಂದು ನಾನು ಕೇಳಿದೆ. ಇಲ್ಲಿಯವರೆಗೆ ಒಂದು ಬಿಡಿಗಾಸೂ ನಮಗೆ ಬಂದಿಲ್ಲ ಎನ್ನುವ ಮಾತನ್ನು ಅವರು ಹೇಳಿದರು. ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಾರರದ್ದೂ ಅದೇ ಪರಿಸ್ಥಿತಿ ಇದೆ. ಇವತ್ತು ಕಬ್ಬು ಬೆಳೆಗಾರರ ವಿಷಯದಲ್ಲಿ ಕಳೆದ ಒಂದು ತಿಂಗಳಿಂದ ಚರ್ಚೆಗಳು ನಡೆಯುತ್ತಿವೆ. ನಾನು ಇಲ್ಲಿ ಮಾತನಾಡುತ್ತಿರುವ ವಿಷಯದ ಪೀಠಿಕೆಯನ್ನು ಕೇಳಿದರೆ ಕೆಲವರಿಗೆ ಅನ್ನಿಸಬಹುದು, ಏಕೆಂದರೆ ಕೆಲವೊಂದು ಮಾಧ್ಯಮದ ಸ್ನೇಹಿತರು ಬರೆದಿದ್ದಾರೆ, ಇಲ್ಲಿಗೆ ಬರುವುದಕ್ಕಿಂತ ಮುಂಚೆ ನಾನು ನಮ್ಮ ಪಕ್ಷದ ವತಿಯಿಂದ ಸದನದಲ್ಲಿ ಚರ್ಚೆ ಮಾಡಲು ಯಾವಯಾವ ವಿಷಯಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ಬಗ್ಗೆ ಚರ್ಚೆ ಮಾಡಲು ಒಂದು ಸಭೆ ಕರೆದಿದ್ದೆ. ನಮ್ಮ ಸಭೆಗೆ ಬಹಳ ಜನ ಶಾಸಕರು ಬಂದಿರಲಿಲ್ಲ ಎಂದು ಒಂದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಗಮನಿಸಿದ್ದೇನೆ. ಈಗಾಗಲೇ ಸಿದ್ದರಾಮಯ್ಯನವರು ಕುಮಾರಸ್ವಾಮಿಯವರ ಜೊತೆ ಒಪ್ಪಂದ ಮಾಡಿಕೊಂಡು ಬಿಟ್ಟಿದ್ದಾರೆ, ಕುಮಾರಸ್ವಾಮಿಯವರು ಅವರ ಜೊತೆ ಕೈಜೋಡಿಸಿ ಕೆಲಸ ಮಾಡುವುದರಿಂದ ನಾವು ಶಾಸಕಾಂಗ ಪಕ್ಷದ ಸಭೆಗೆ ಹೋಗಿ ಅಲ್ಲೇನು ಚರ್ಚೆ ಮಾಡುವುದು ಎಂದು ಕೆಲವು ಶಾಸಕರು ಸಭೆಗೆ ಹೋಗಲಿಲ್ಲ ಎಂದು ಹೇಳಿದ್ದಾರೆ ಎಂದು ಒಂದು ಪತ್ರಿಕೆಯಲ್ಲಿ ದೊಡ್ಡದಾಗಿ ಆರ್ಟಿಕಲ್ ಬರೆದುದನ್ನು ನಾನು ಗಮನಿಸಿದ್ದೇನೆ. ನಾನು ಏತಕ್ಕೆ ಪೀಠಿಕೆಯಲ್ಲಿ ಇದನ್ನೆಲ್ಲ ಹೇಳುತ್ತಿದ್ದೇನೆ ಎಂದರೆ, ನಾನು ಆಗಸ್ಟ್ 22, 2013ರಂದು ಮುಖ್ಯಮಂತ್ರಿಗಳಿಗೆ ಬರೆದಂಥ ಪತ್ರದಲ್ಲಿ ಅವರ ಗಮನಕ್ಕೆ ತಂದಂಥಾದ್ದು ಏನೆಂದರೆ, ಮಾರ್ಚ್ 2013ರ ಅಂತ್ಯಕ್ಕೆ ರೈತರಿಗೆ ನೀಡಬೇಕಾದ 1,705 ಕೋಟಿ ಬಾಕಿ ಹಣವನ್ನು ಕಳೆದ 4–5 ವರ್ಷಗಳಿಂದ ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾಗಿದೆ. 2013ಕ್ಕಿಂತ ಮುಂಚೆ 4–5 ವರ್ಷಗಳಲ್ಲಿ ಇದ್ದಂಥ ಸರ್ಕಾರ ಯಾವುದು? ಹಿಂದೆ ಇದ್ದಂಥ ಸರ್ಕಾರಗಳು ಸುಮಾರು 1,700 ಕೋಟಿ ರೂಪಾಯಿಗಳನ್ನು ಸಕ್ಕರೆ ಕಾರ್ಖಾನೆಗಳ ಮಾಲೀಕರಿಂದ ಕಬ್ಬು ಬೆಳೆಗಾರರಿಗೆ ಕೊಡಿಸುವಂಥ ಜವಾಬ್ದಾರಿಯಲ್ಲಿ ಎಡವಿದ್ದಾರೆ ಎಂದು ನಾನು

ಹೇಳುವುದಿಲ್ಲ, ಬೇರೆಬೇರೆ ಕೆಲಸಗಳಿಂದ ಅವರು ಅದನ್ನು ಮರೆತಿರಬಹುದು, ಅದನ್ನು ನೆನಪಿಸಿಕೊಡುತ್ತಿದ್ದೇನೆ. 2013ರ ಮೇ 26ನೇ ತಾರೀಖು ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರು ಕಬ್ಬು ಬೆಳೆಗಾರರ ಒಂದು ಸಮಾವೇಶದಲ್ಲಿ ಭಾಗವಹಿಸಿದ್ದರು. ಆಗ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳುತ್ತಾರೆ, ರಾಜ್ಯದ ಸಕ್ಕರೆ ಉದ್ಯಮಕ್ಕೆ 550 ಲಕ್ಷ ಮೆಟ್ರಿಕ್ ಟನ್ ಕಬ್ಬಿನ ಬೇಡಿಕೆ ಇದೆ. ಆದರೆ ರಾಜ್ಯದಲ್ಲಿ 450 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಮಾತ್ರ ಬೆಳೆಯಲಾಗುತ್ತಿದೆ. ಕಬ್ಬು ಬೆಳೆಗಾರರ ಸಮಸ್ಯೆಯನ್ನು ಪರಿಹರಿಸಿದಲ್ಲಿ ಈ ಅಭಾವವನ್ನು ತುಂಬಲು ಸಾಧ್ಯ, ಕಬ್ಬು ಬೆಳೆಗೆ ನಿಗದಿಯಾಗಿರುವ ನೀರನ್ನು ಒದಗಿಸುವುದು ಸರ್ಕಾರದ ಪ್ರಥಮ ಆದ್ಯತೆ ಎಂದು ಮುಖ್ಯಮಂತ್ರಿಗಳು, ಕಬ್ಬು ಬೆಳೆಗಾರರ ರಕ್ಷಣೆಗಾಗಿ ಕರೆದಿದ್ದಂಥ ಸಭೆಯಲ್ಲಿ ಹೇಳಿದಂಥ ಮಾತು. ಅದರ ಜೊತೆಗೆ, ಕೃಷಿ ಸಚಿವರಾದ ಕೃಷ್ಣ ಬೈರೇಗೌಡರು, ಬೆಲೆ ಏರಿಕೆಗೆ ಮಾನಸಿಕವಾಗಿ ತಯಾರಾಗಿ ಎಂದು ಹೇಳುತ್ತಾರೆ. ರೈತ ಉಪಯೋಗ ಮಾಡುವಂಥ ಕೃಷಿ ಉಪಕರಣಗಳ ಬೆಲೆ ಜಾಸ್ತಿಯಾಗಿದೆ, ಕೂಲಿ ಜಾಸ್ತಿಯಾಗಿದೆ, ಆದ್ದರಿಂದ ರೈತನಿಗೆ ಹೆಚ್ಚಿನ ಬೆಲೆ ಕೊಡಬೇಕಾದಂಥಾದ್ದು ಸರ್ಕಾರದ ಕರ್ತವ್ಯವಾಗಿದೆ, ಇದು ಗ್ರಾಹಕರ ಮೇಲೆ ಏನಾದರೂ ಹೊರೆಯಾದರೆ, ಅದಕ್ಕೆ ಗ್ರಾಹಕರು ಸಿದ್ಧವಾಗಬೇಕು ಎಂದು ಕೃಷಿ ಸಚಿವರು ಆ ಸಭೆಯಲ್ಲಿ ಹೇಳಿಕೆ ಕೊಡುತ್ತಾರೆ ಮತ್ತು ಉದ್ಯೋಗ ಖಾತರಿ ಯೋಜನೆಯಿಂದ ಕೃಷಿ ಕಾರ್ಮಿಕರ ಕೊರತೆಯಾಗಿದೆ, ಈ ಯೋಜನೆಯಿಂದಾಗಿ ರೈತರು ಕೂಲಿ ಆಳುಗಳನ್ನು ಪಡೆಯಲು ಹೆಚ್ಚಿನ ಹೊರೆ ಬೀಳುತ್ತಿದೆ ಎಂದೂ ಸಹ ಕೃಷಿ ಸಚಿವರು ಮೇ 26, 2013ರ ಸಭೆಯಲ್ಲಿ ಚರ್ಚೆ ಮಾಡಿದ್ದಾರೆ. ನಾನು ಏಕೆ ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ SAP ಕಾಯಿದೆಯ ಜಾರಿಯಿಂದ ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಟನ್ನಿಗೆ ex-field ಗೆ 2,500 ರೂಪಾಯಿ, ದಕ್ಷಿಣ ಕರ್ನಾಟಕದ ಭಾಗಕ್ಕೆ ex-gate ಗೆ ಒಂದು ಟನ್ನಿಗೆ ಎರಡೂವರೆ ಸಾವಿರ ರೂಪಾಯಿ ಎಂದು ನಿಗದಿ ಮಾಡಿದಿರಿ. ಈ ವರ್ಷ ಕೇಂದ್ರ ಸರ್ಕಾರದವರು ಒಂದು ಟನ್ನಿಗೆ 2,200 ರೂಪಾಯಿ FRP ಎಂದು ದರವನ್ನು ನಿಗದಿ ಮಾಡಿದ್ದಾರೆ. ನಿನ್ನೆ ಪಾರ್ಲಿಮೆಂಟಿನಲ್ಲಿ ಕೇಂದ್ರದ ಆಹಾರ ಇಲಾಖೆಯ

ಸಚಿವರು ಒಂದು ಪ್ರಶ್ನೆಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. Paswan said, request for payment of the differential between state advised price and Fare and remunerative price relates to the respective states.

ಇವರು ಇಲ್ಲಿ ಕಬ್ಬು ಬೆಳೆಗಾರರನ್ನು ಜಾಥಾ ಕರೆದುಕೊಂಡು ಬಂದು ಸುವರ್ಣಸೌಧಕ್ಕೆ ಮುತ್ತಿಗೆ ಹಾಕಿಸಿ ರೈತರಿಗೆ ಬೆಲೆ ಕೊಡಿಸುವವರಂತೆ. ನಾನು ಏತಕ್ಕೆ ಇಲ್ಲಿ ಇದನ್ನು ಹೇಳುತ್ತಿದ್ದೇನೆಂದರೆ ಕೇಂದ್ರದಲ್ಲಿ ಹೊಸದಾಗಿ ಬಂದಿರುವ ಸರ್ಕಾರದವರು Make in India ಎನ್ನುವ ಘೋಷಣೆಯನ್ನು ಹೇಳಿದ್ದಾರೆ. ಅದಕ್ಕೆ ನಾನು ಪ್ರಧಾನ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಯಾವ ರೀತಿಯಲ್ಲಿ ನಾವು Make in India ಮಾಡಬೇಕಾಗಿದೆ? ಈ ಕೃಷಿಕರನ್ನು ಸಂಪೂರ್ಣ ನೆಲಸಮ ಮಾಡಿ Make in India ಮಾಡಬೇಕೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಲೋಕಸಭೆಯಲ್ಲಿ ಕೇಂದ್ರದ ಸಚಿವರು ಹೇಳಿಕೆ ಕೊಡುತ್ತಾರೆ. ಕೃಷಿ ವಿಷಯ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿರುವುದಲ್ಲ, ಅದು ರಾಜ್ಯಸರ್ಕಾರದ ವಿಷಯ, ನೀವು ಅಲ್ಲಿ ಚರ್ಚೆ ಮಾಡಿಕೊಳ್ಳಿ ಎಂದು ಮೊನ್ನೆ ಲೋಕಸಭೆಯಲ್ಲಿ ಹೇಳಿದ್ದಾರೆ. ಇದು ಯಾವ ರೀತಿಯಲ್ಲಿ ನಿಮ್ಮ ನೀತಿಗಳು ಇವೆ, ಇಲ್ಲಿ ನಾವ್ಯಾರೂ ಗುತ್ತಿಗೆ ತೆಗೆದುಕೊಂಡಿಲ್ಲ. ಇವತ್ತು ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳ ಜವಾಬ್ದಾರಿ ಜಾಸ್ತಿ ಇದೆ. ನಾವು ಇಲ್ಲಿ ಸಣ್ಣ ಪುಟ್ಟವರು, ನಾವು ನಾಳೆ ಬೆಳಿಗ್ಗೆ ಇರುತ್ತೇವೆಯೋ ಇಲ್ಲವೋ, ಏನೋ ಮುಗಿದೇ ಹೋಗಿದೆ ಭವಿಷ್ಯ ಎನ್ನತಕ್ಕಂಥದ್ದನ್ನು ಪ್ರತಿನಿತ್ಯ ಮಾಧ್ಯಮಗಳಲ್ಲಿ ಬರುತ್ತಿರುವುದನ್ನು ನೋಡುತ್ತಿದ್ದೇನೆ. ನಮ್ಮದು ಇಲ್ಲಿ role ಕಡಿಮೆ. ನಮ್ಮಿಂದ ಏನೂ ಮಾಡುವುದಕ್ಕಾಗುವುದಿಲ್ಲ. ನಮಗೆ ಶಕ್ತಿ ಇಲ್ಲ. ಜನರು ನಮಗೆ ಶಕ್ತಿ ಕೊಟ್ಟಿಲ್ಲ, ನಿಮ್ಮೆರಡು ಪಕ್ಷಗಳಿಗೆ ಜನರು ಶಕ್ತಿ ಕೊಟ್ಟಿದ್ದಾರೆ. ಎರಡು ರಾಷ್ಟ್ರೀಯ ಪಕ್ಷಗಳಿಗೆ ನಮಗಿಂತ ಹೆಚ್ಚು ಜವಾಬ್ದಾರಿ ನಿಮಗಿದೆ. ದಯವಿಟ್ಟು ನಾನು ಕೈಜೋಡಿಸಿ ಮನವಿ ಮಾಡುತ್ತೇನೆ. ರೈತರ ಜೀವನದ ಜೊತೆ ನಾವ್ಯಾರೂ ಚೆಲ್ಲಾಟ ಆಡುವುದು ಬೇಡ. 50 ಸಾವಿರ ರೈತರನ್ನು ಸೇರಿಸುತ್ತೇವೆಂದು ನಮ್ಮ ಮಿತ್ರ ಪಕ್ಷದವರು ಹೇಳಿದರು. ಇವತ್ತು ರೈತರು

ಚಳುವಳಿಗೆ ಬನ್ನಿ ಎಂದು ಕರೆದರೆ ಏತಕ್ಕೆ ಬರುವುದಿಲ್ಲ? ನೋಡುತ್ತಿದ್ದೇನೆ. ರೈತರಿಗೆ ಇಂಥ ಸಂಕಷ್ಟ ಇದ್ದರೂ ರೈತರು ಏತಕ್ಕೆ ಹೊರಗೆ ಬರಲಿಕ್ಕೆ ತಯಾರಿಲ್ಲ? ಇವತ್ತು ಆ ಕಬ್ಬು ಬೆಳೆಯತಕ್ಕಂಥ ಬೆಳೆಗಾರನಿಗೆ ಈಗ ಹಣ ಮುಖ್ಯವಾಗಿಲ್ಲ. ಅವನು ತನ್ನ ಹೊಲದಲ್ಲಿ ಬೆಳೆದಿರತಕ್ಕಂಥ ಕಬ್ಬು ಏನಿದೆ, ಆ ಕಬ್ಬನ್ನು ಅವನು ಬೆಳೆದಿರತಕ್ಕಂಥ ತಪ್ಪಿಗೆ ಆ ಕಾರ್ಖಾನೆಗೆ compoundಗೆ ತಂದುಹಾಕಿಬಿಟ್ಟರೆ ಸಾಕು. ಇದು ಅವನ ಪರಿಸ್ಥಿತಿ. ಆದ್ದರಿಂದ, ನಾವು ಚಳುವಳಿ ಮಾಡಿಸುತ್ತೇವೆ, ನಿಮಗೆ ಬೆಲೆ ಕೊಡಿಸುತ್ತೇವೆ ಬನ್ನಿ ಎಂದರೆ, ಆ ರೈತರು ಇವತ್ತು ನಮ್ಮನ್ನು ನಂಬತಕ್ಕ ಪರಿಸ್ಥಿತಿಯಲ್ಲಿ ಉಳಿದಿಲ್ಲ. ಕಳೆದ ಒಂದು ವರ್ಷದಿಂದ ಹಲವಾರು ಪತ್ರಿಕೆಗಳಲ್ಲಿ ಈ ವಿಷಯದ ಮೇಲೆ ಚರ್ಚೆಗಳನ್ನು ಮಾಡಿದ್ದಾರೆ. ನಮ್ಮ ಸಹಕಾರಿ ಸಕ್ಕರೆ ಸಚಿವರು ಈಗ ಪ್ರಕಾಶ ಹುಕ್ಕೇರಿಯವರು ಇಲ್ಲ, ಅವರು ಲೋಕಸಭೆಗೆ ಆಯ್ಕೆಯಾಗಿ ಹೋಗಿದ್ದಾರೆ. ಬಹುಶಃ ಈಗ ಸಕ್ಕರೆ ಖಾತೆಯನ್ನು ಶ್ರೀ ಮಹದೇವ ಪ್ರಸಾದ್‌ರವರೇ ಜವಾಬ್ದಾರಿ ವಹಿಸಿಕೊಂಡಿರಬೇಕೆಂದು ತೋರುತ್ತದೆ. ಅವರು ಹೇಳಿಕೆ ಕೊಟ್ಟಿರುವುದನ್ನು ಗಮನಿಸಿದ್ದೇನೆ. ನಿನ್ನೆಯ ದಿವಸ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಮಾತನಾಡಿದರು, ಲಕ್ಷ್ಮಣ ಸವದಿಯರು ಮಾತನಾಡಿದರು, ಗೋವಿಂದ ಕಾರಜೋಳರವರೂ ಸಹ ಮಾತನಾಡಿದರು. ಕಳೆದ ವಿಧಾನಸಭೆ ಕಲಾಪದಲ್ಲೂ ಮಾತನಾಡಿದ್ದೇವೆ. ನಾವು ಹೇಳಿದ್ದನ್ನೇ ಹೇಳಿಕೊಂಡು ಕುಳಿತುಕೊಳ್ಳುವುದರಲ್ಲಿ ಅರ್ಥವಿಲ್ಲವೆನ್ನುವುದು ನನ್ನ ಅಭಿಪ್ರಾಯ. ಸುದೀರ್ಘವಾಗಿಯೇ ಚರ್ಚೆ ನಡೆದಿದೆ. ನಿನ್ನೆ ಲಕ್ಷ್ಮಣ ಸವದಿಯವರು ಬಹಳ ಜೋರಾಗಿ ಮಾತನಾಡಿದರು. ನಿನ್ನೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇರಲಿಲ್ಲ. ಸವದಿಯವರು ಅಲೆಗ್ಸಾಂಡರ್ ಕತೆಯನ್ನು ಹೇಳಿದರು. ಅಲೆಗ್ಸಾಂಡರ್ ಕತೆ ಹೇಳಿ ಮುಖ್ಯಮಂತ್ರಿಯವರನ್ನು ಉದಾಹರಣೆ ಕೊಟ್ಟು, ಅಲೆಗ್ಸಾಂಡರ್ ಏನು ಕೊನೆಗೆ ಅಂತಿಮವಾಗಿ ಆ ಭೂಮಿಗೆ ಹೋಗಬೇಕಾದರೆ ಯೋಚನೆ ಮಾಡಿದರು. ಇದನ್ನೆಲ್ಲ ಬಹಳ ಸೊಗಸಾಗಿ ಹೇಳಿದರು. ಚರ್ಚೆ ಮಾಡಿದರು, ಪಾಪ, ಮುಖ್ಯಮಂತ್ರಿಗಳಿಗೆ ಹೇಳಿದರು. ಕಾರ್ಖಾನೆ ಮಾಲೀಕರ ಮೇಲೆ ನೀವೇನಾದರೂ ಕ್ರಮ ತೆಗೆದುಕೊಂಡುಬಿಟ್ಟರೆ ನಿಮ್ಮ ಕುರ್ಚಿ

ಅಲುಗಾಡಿಬಿಡುತ್ತದೆ, ಅಧಿಕಾರ ಹೋಗಿಬಿಡುತ್ತದೆ ಎನ್ನುವ ಭಯವೇ? ಭಯ ಬೀಳಬೇಡಿ, ನೀವು ತೀರ್ಮಾನ ತೆಗೆದುಕೊಳ್ಳಿ, ಅವರ ಮೇಲೆ ಕ್ರಮ ತೆಗೆದುಕೊಂಡು ಜೈಲಿಗೆ ಕಳುಹಿಸಿ ಎಂದು ನಿನ್ನೆ ಹೇಳಿದರು. ನಾನು ಇಲ್ಲಿ ಗಮನಿಸುತ್ತಾ ಕುಳಿತಿದ್ದೆ. ಬಹುಶಃ ನನಗೆ ತಿಳಿದ ಮಟ್ಟಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಾರ್ಖಾನೆ ಮಾಲೀಕರನ್ನು ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಅವರ ಮೇಲೆ ಏನೇ ಬಿಗಿ ಕ್ರಮ ತೆಗೆದುಕೊಂಡರೂ ಏನೂ ಮಾಡಲಿಕ್ಕೆ ಆಗುವುದಿಲ್ಲ. ಅವರಿಗೆ ಅಲ್ಲಿ High Command ರಕ್ಷಣೆ ಇದೆ. High Command ರಕ್ಷಣೆ ಇರುವವರೆಗೆ ಬಹುಶಃ ಯಾವ ಕಾರ್ಖಾನೆ ಮಾಲೀಕರಿಗೂ ಏನೂ ಮಾಡುವುದಕ್ಕಾಗುವುದಿಲ್ಲವೆನ್ನುವುದು ನನ್ನ ಅಭಿಪ್ರಾಯ. ಆದ್ದರಿಂದ, ಈ ವಿಷಯದಲ್ಲಿ ಬಹುಶಃ ಅವರೇ ಹೆದರಿದ್ದಾರೆಂದು ನಾನು ಭಾವಿಸುವುದಕ್ಕೆ ಹೋಗುವುದಿಲ್ಲ. ಕಳೆದ ವಿಧಾನಸಭೆ ಕಲಾಪದಲ್ಲಿ ಏನು ಸುದೀರ್ಘವಾಗಿ ಚರ್ಚೆ ನಡೆಯುತ್ತಿತ್ತು, ಬಹುಶಃ ನಮ್ಮ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಯಡಿಯೂರಪ್ಪನವರು ಈ ಸದನದಲ್ಲಿದ್ದರು. ನಾವು ಕಬ್ಬು ವಿಷಯದಲ್ಲಿ ರೈತರ ಬಗ್ಗೆ ಚರ್ಚೆ ಮಾಡಿದರೆ ಅವರು ಶಾದಿ ಭಾಗ್ಯದ ಒಂದು ಪ್ರಮುಖವಾದ ವಿಷಯವನ್ನು ಇಟ್ಟುಕೊಂಡು, ಮಾತನಾಡಿದರು. ಬಿದಾಯಿ ಯೋಜನೆ ಬಗ್ಗೆ ಸದನದ ಕಲಾಪದಲ್ಲಿ ಅದರ ಬಗ್ಗೆಯೂ ಸುಮಾರು 2 ಗಂಟೆ ಕಾಲ ಚರ್ಚೆ ನಡೆದಿದೆ. ಇಲ್ಲಿ ನಮ್ಮ ಶ್ರೀ ಆರ್.ಅಶೋಕ್‌ರವರು ಮಾತನಾಡಬೇಕಾದರೆ ಶಾದಿಭಾಗ್ಯ ಎಂದು ಅವರು ಪದೇ ಪದೇ ಹೇಳುತ್ತಿದ್ದರು, ಆ word ಅನ್ನು ಪದೇ ಪದೇ ಉಚ್ಚಾರಣೆ ಮಾಡುತ್ತಿದ್ದರು. ಆಡಳಿತ ಪಕ್ಷದ ಭಾಗದಿಂದ ಅದು ಶಾದಿಭಾಗ್ಯದ ಕಾರ್ಯಕ್ರಮವೇ ನಮ್ಮಲ್ಲಿ ಇಲ್ಲ ಎಂದು ಹೇಳಿ ಅದು ಬಿದಾಯಿ ಕಾರ್ಯಕ್ರಮ ಎಂದು ಹೇಳಿದಿರಿ. ಅದಕ್ಕೆ ಚರ್ಚೆಗಳು ನಡೆದು ಯಡಿಯೂರಪ್ಪನವರ ಜೊತೆಗೆ ನಮ್ಮ ಕೆಲವು ಸ್ನೇಹಿತರುಗಳು ಬಾವಿಯಲ್ಲಿ ಕುಳಿತಿದ್ದರು. ಸರ್ಕಾರದ ಆ ಯೋಜನೆ ಬಹುಶಃ 5 ಕೋಟಿ ರೂಪಾಯಿಗಳ ಕಾರ್ಯಕ್ರಮವಿರಬಹುದು. ಅದೇ ಒಂದು ಪ್ರಮುಖವಾದ ವಿಷಯ ಎನ್ನತಕ್ಕಂಥ ರೀತಿಯಲ್ಲಿ ಬಾವಿಯಲ್ಲಿದ್ದರು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದು ಅನ್ಯಥಾ ಭಾವಿಸಬೇಡಿ. ಅಲ್ಲಿ

ರೈತರು ಯಾವ ಒಂದು ಪ್ರತಿಭಟನೆ ನಡೆಸುತ್ತಿದ್ದರು, ವಿಠಲ ಅರಬಾವಿ ಎನ್ನತಕ್ಕಂಥ ರೈತ ಆತ್ಮಹತ್ಯೆ ಮಾಡಿಕೊಂಡ ಎನ್ನತಕ್ಕಂಥ ವಿಷಯ ಪ್ರಸ್ತಾಪವಾಗುತ್ತಿದ್ದ ಹಾಗೆ ಆ ಬಾವಿಯಿಂದ ಇದ್ದವರೆಲ್ಲ ಒಳಗಡೆಗೆ ಈ ಕಡೆಗೆ ಚರ್ಚೆ ಮಾಡಲಿಕ್ಕೆ ಬಂದಿರಿ. ಅದಕ್ಕಿಂತ ಪ್ರಮುಖವಾಗಿ ನೀವು ಚರ್ಚೆ ಶಾದಿಭಾಗ್ಯ, ಬಿದಾಯಿ ಯೋಜನೆ ಬಗ್ಗೆ ಆವತ್ತು ಚರ್ಚೆ ಮಾಡುತ್ತಾ ಕುಳಿತಿದ್ದೀರಿ, ನೆನಪಿಸಿಕೊಡುತ್ತೇನೆ. ಆ ರೈತ ಸತ್ತಿದ್ದ ಹಾಗೆಯೇ ಆಗ ರೈತರು ಜ್ಞಾಪಕಕ್ಕೆ ಬಂದರು. ಬಿದಾಯಿ ಯೋಜನೆ/ಶಾದಿಭಾಗ್ಯ ಯೋಜನೆಯನ್ನು ಅಲ್ಲಿಗೇ ಬಿಟ್ಟಾಯಿತು. ಆವತ್ತು ಚರ್ಚೆಯಾದಾಗ ಮಾನ್ಯ ಮುಖ್ಯಮಂತ್ರಿಯವರು ಅಂತಿಮವಾಗಿ ಎಲ್ಲೋ ಒಂದು ಕಡೆ ಒಂದು ಮನಃಪರಿವರ್ತನೆ ಮಾಡಿಕೊಂಡು ಪ್ರತಿ ಟನ್‌ಗೆ 150 ರೂಪಾಯಿಗಳ incentive ಕೊಡುತ್ತೇವೆನ್ನುವ ಘೋಷಣೆಯನ್ನು ಸದನದಲ್ಲಿ ಮಾಡಿದರು. ಟನ್ ಒಂದಕ್ಕೆ 2500 ರೂ. ಕೊಡಬೇಕೆಂದು ಕಾರ್ಖಾನೆ ಮಾಲೀಕರಿಗೆ ನಿಗದಿ ಏನು ಮಾಡಿದ್ದೀರಿ, ಆವತ್ತಿನ ಸಭೆಯಲ್ಲಿ ಬಹುಶಃ ನಮ್ಮ ರೈತ ಸಂಘದ ಮುಖಂಡರುಗಳು, ಕಾರ್ಖಾನೆಯ ಮಾಲೀಕರೂ ಎಲ್ಲಾ ಇದ್ದರು. ನೀವು 2,500 ರೂ. ಗಳ SAP ದರ ನಿಗದಿ ಮಾಡಿ ಘೋಷಣೆ ಮಾಡಿದಿರಿ. ಆದರೆ ಆವತ್ತು ಕಾರ್ಖಾನೆ ಮಾಲೀಕರೂ ಒಪ್ಪಿರಲಿಲ್ಲ, ಟನ್ ಒಂದಕ್ಕೆ 2,500 ರೂ.ಗಳಲ್ಲಿ ನಮ್ಮ ವೆಚ್ಚವನ್ನು ಭರಿಸಿಕೊಳ್ಳಲಿಕ್ಕೆ ಆಗುವುದಿಲ್ಲವೆಂದು ರೈತರೂ ಸಹ ಅಸಮಾಧಾನವಾಗಿಯೇ ಇದ್ದರು. ಆದರೆ, ಅಂತಿಮವಾಗಿ ಆ ರೈತ ಆತ್ಮಹತ್ಯೆ ಮಾಡಿಕೊಂಡ ಮೇಲೆ ಸದನದಲ್ಲಿ ಚರ್ಚೆಯಾಗಿ, ಒಂದು ಟನ್ ಕಬ್ಬಿಗೆ 2500 ರೂ.ಗಳನ್ನು ನಿಗದಿ ಮಾಡಿದ ಮೇಲೆ ಸಕ್ಕರೆ ಕಾರ್ಖಾನೆಯ ಮಾಲೀಕರಿಂದ ನಾನು ಕೊಡಿಸಿಯೇ ಕೊಡಿಸುತ್ತೇನೆಂದು ಅತ್ಯಂತ ಆತ್ಮವಿಶ್ವಾಸದಿಂದ ಆವತ್ತು ನಮ್ಮ ಮುಖ್ಯಮಂತ್ರಿಯವರು ಇದೇ ಸದನದಲ್ಲಿ ಹೇಳಿದರು. ಕಾರ್ಖಾನೆ ಮಾಲೀಕರು ಟನ್ ಒಂದಕ್ಕೆ 2,500 ರೂ.ಗಳನ್ನು ಕೊಡುತ್ತಾರೆನ್ನುವುದರಲ್ಲಿ ನಮಗೆ ನಂಬಿಕೆ ಇಲ್ಲವೆಂದು ಆವತ್ತು ನಾನು ಮುಖ್ಯಮಂತ್ರಿಯವರಿಗೆ ಹೇಳಿದೆ ಹಾಗೆಯೇ ಹಲವಾರು ಸದಸ್ಯರುಗಳೂ ಹೇಳಿದರು. ಆವತ್ತು ಕೇಂದ್ರಸರ್ಕಾರ ನಿಗದಿ ಮಾಡಿದ 2,100 ರೂ.ಗಳ FRP ಏನಿತ್ತು, 400 ರೂ. ಏನು ನಾವು SAP ಜಾಸ್ತಿ ಮಾಡಿದ್ದೆವು, ಆ ಹಣವನ್ನು

ರಾಜ್ಯ ಸರ್ಕಾರವೇ ವಹಿಸಿಕೊಂಡು ನೀವು ರೈತರಿಗೆ ಕೊಟ್ಟುಬಿಡಿ, ಕಾರ್ಖಾನೆ ಮಾಲೀಕರಿಂದ ನೀವು ಯಾವಾಗ ಬೇಕಾದರೂ ಯಾವ ರೀತಿಯಲ್ಲಾದರೂ ವಸೂಲಿ ಮಾಡಿ ಎಂದು ನಾನು ಆವತ್ತೇ ಇಲ್ಲಿ ನಡೆದ ಸದನದ ಕಲಾಪದಲ್ಲಿ ಪ್ರಸ್ತಾಪ ಮಾಡಿದ್ದೇನೆ. ನಂತರ ಬೆಂಗಳೂರಿನಲ್ಲಿ ನಡೆದಂಥ ಅಧಿವೇಶನದಲ್ಲಿ ಆವತ್ತೂ ಕೂಡ ನಾನು ಮುಖ್ಯಮಂತ್ರಿಯವರಿಗೆ ಹೇಳಿದೆ. ನನಗೆ ನಂಬಿಕೆ ಇಲ್ಲ, ನೀವು 150 ರೂಪಾಯಿಗಳನ್ನು incentive ಆಗಿ ಕೊಡುತ್ತೇವೆಂದು ಹೇಳಿದಿರಿ, 2013ರ ಡಿಸೆಂಬರ್ ತಿಂಗಳಿನಲ್ಲಿಯೂ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದೆ. ಏನೇನು ಪರಿಸ್ಥಿತಿಗಳಿವೆ ಎಂದು ಹೇಳಿ ಅವರಿಗೆ ನೆನಪಿಸಿಕೊಟ್ಟೆ. ಕಳೆದ ವರ್ಷದ ಬಾಕಿ 1724 ಕೋಟಿ ರೂ.ಗಳನ್ನು ಈಗಲೂ ಕೊಟ್ಟಿಲ್ಲ, ಅದನ್ನೇ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ಪ್ರಶ್ನೆ ಏನೆಂದರೆ, ಒಂದು ವರ್ಷದಿಂದ 1724 ಕೋಟಿ ರೂ.ಗಳಿಗೆ ಬಡ್ಡಿ ಎಷ್ಟಾಗುತ್ತದೆ ಅದನ್ನು ನಾವಿನ್ನೂ ಲೆಕ್ಕ ಹಾಕುತ್ತಿಲ್ಲ. 1724 ಕೋಟಿ ರೂ.ಗಳ arrears ಇಟ್ಟುಕೊಂಡಿದ್ದಾರೆ, ಹಣ ಕೊಡಿಸಿ ಎನ್ನತಕ್ಕಂಥ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: 1700 ಕೋಟಿ ರೂ. ಬಾಕಿ ಇದೆ ಎಂದು ಇರುವುದು ಸರ್ಕಾರದ ದಾಖಲೆಯಲ್ಲಿ. ರೈತರ ದಾಖಲೆಯಲ್ಲಿ 2,500 ಕೋಟಿ ರೂ. ಬಾಕಿ ಇದೆ ಎಂದು ಇದೆ. ಇದನ್ನು ಪೂರಕ ಮಾಹಿತಿ ಇರಲಿ ಎಂದು ಹೇಳಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಒಪ್ಪುತ್ತೇನೆ. ನಾನು ಸರ್ಕಾರ ಕೊಟ್ಟಿರತಕ್ಕಂಥ ದಾಖಲೆ ಮೇಲೆ ಮಾತನಾಡಬೇಕು. ಇಲ್ಲಿ ಅಧಿಕೃತವಾಗಿ ನಾವು ತೆಗೆದುಕೊಳ್ಳಬೇಕಾದಂಥದ್ದು ಸರ್ಕಾರ ಕೊಟ್ಟ ದಾಖಲೆಯನ್ನೇ. ಉದಹರಣೆಗೆ, ನಿನ್ನೆ ಶ್ರೀ ಗೋವಿಂದ ಎಂ.ಕಾರಜೋಳರವರು ಮಾತನಾಡಿದರು. ಒಂದು ಎಕರೆ ಕಬ್ಬನ್ನು ಬೆಳೆಯಲಿಕ್ಕೆ ರೈತನಿಗೆ 80 ಸಾವಿರ ರೂಪಾಯಿಗಳ ಖರ್ಚು ಆಗುತ್ತದೆ ಎಂದು ಹೇಳಿದರು. ನಾವು ಹೊರಗಡೆ ಆ ರೈತರನ್ನು ಕೇಳಿದರೆ ಇಲ್ಲ, 40 ಸಾವಿರ, 45 ಸಾವಿರ ರೂ. ಖರ್ಚು ಬರುತ್ತದೆಂದು ಹೇಳುತ್ತಾರೆ. ನಾನು ಗೋವಿಂದ ಎಂ.ಕಾರಜೋಳರವರ

ಮಾತನ್ನು ನಂಬಲೋ, ಹೊರಗಡೆ ರೈತ ಹೇಳುತ್ತಾನಲ್ಲ ಅವನ ಮಾತನ್ನು ನಂಬಲೋ, ಇಲ್ಲವೆಂದರೆ ಸರ್ಕಾರದ ನಮ್ಮ university ಯವರು ಎಷ್ಟೆಷ್ಟು ಎಂದು ಲೆಕ್ಕಗಳನ್ನು ಕೊಡುತ್ತಾರಲ್ಲ ಅದನ್ನು ನಂಬಲೋ. ನಾವು ರೈತರ ಪರವಾಗಿಯೇ ಇದ್ದೇವೆ. ಅದಕ್ಕೆ ರೈತರ ಪರವಾಗಿ ನೀವೂ ಕೂಡ ಇರಬೇಕೆಂಬುದು ನನ್ನ ಆಸೆ. ಅದಕ್ಕೋಸ್ಕರವೇ ಇವತ್ತು ಜವಾಬ್ದಾರಿ ನೀವು ತೆಗೆದುಕೊಳ್ಳಬೇಕಾಗಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಕಾರ್ಖಾನೆಗಳು ಎಷ್ಟೆಷ್ಟು crushing ಮಾಡಿದ್ದಾರೆ? sugar ಎಷ್ಟು produce ಮಾಡಿದ್ದಾರೆ? recovery ವಿಷಯಕ್ಕೆ ಬಂದರೆ MPM Sugars ಅತ್ಯಂತ lowest recovery ಇರುವಂಥದ್ದು. MPM Sugars 9.38, ಅದರ ಜೊತೆಗೆ Mysugars recovery 8.30, ಪಾಂಡವಪುರ ಸಕ್ಕರೆ ಕಾರ್ಖಾನೆ ಅತ್ಯಂತ lowest recovery ಎಂದರೆ 6.78, Hemavathi sugars Chamundeshwari sugars ಏನು ನಡೆಸುತ್ತಿದ್ದಾರೆ ಅದು 9.68 recovery ಇದೆ. Karnataka, leased to GM Sugars 9.65 ecovery ಇದೆ. ಇನ್ನುಳಿದ ಕಾರ್ಖಾನೆಗಳು ಹೆಚ್ಚುಕಡಿಮೆ 10% ರಿಂದ 12% ರವರೆಗೆ ಇದೆ.

ಶ್ರೀ ಬಸವರಾಜ ರಾಯರೆಡ್ಡಿ: ಬೆಳಗಾವಿ ಬಿಜಾಪುರದಲ್ಲಿ 12.56ರವರೆಗೆ ಇಳುವರಿ ಇದೆ. ಎರಡು factory ಇದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇನ್ನುಳಿದ ಕಾರ್ಖಾನೆಗಳು ಹೆಚ್ಚು ಕಡಿಮೆ 10% ರಿಂದ 12%ವರೆಗೆ, ಇವತ್ತು 12.5% ಇದೆ.

ಶ್ರೀ ಬಸವರಾಜ ರಾಯರೆಡ್ಡಿ: 12.56ರವರೆಗೆ ಬೆಳಗಾಂ, ಬಿಜಾಪುರದಲ್ಲಿದೆ. 2 factory ಇದೆ. ಇಳುವರಿ 12.56 ವರೆಗೂ ಇದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನನಗೆ ಮಾಹಿತಿ ಸಿಕ್ಕಿರುವ ಪ್ರಕಾರ ಈ ರೀತಿ. . .

ಶ್ರೀ ಬಸವರಾಜ ರಾಯರೆಡ್ಡಿ: ನಿಮ್ಮ ಮಾಹಿತಿಗೆ ಹೇಳಿದೆ ಅಷ್ಟೇ. ಉತ್ತರ ಕರ್ನಾಟಕದಲ್ಲಿ ಒಂದು factory ಬಿಜಾಪುರಲ್ಲಿ, ಒಂದು ಬೆಳಗಾಂನಲ್ಲಿದೆ. 12.56 ವರೆಗೂ ಇದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅದನ್ನೇ ಹೇಳಿದ್ದು. 10% ಮೇಲೆ 12.52%ವರೆಗೂ ಇದೆ. ಇವತ್ತು official ಆಗಿ ನನಗೆ ಇಲ್ಲಿ ಕೊಟ್ಟಿರತಕ್ಕಂಥ ಮಾಹಿತಿ ಇದು. ಇದು ಹಾಲಸಿದ್ಧನಾಥ ಎಂದು ನಿಪ್ಪಾಣಿಯಲ್ಲಿ 12.52 recovery ಇದೆ. ಬಹುಶಃ ಇಲ್ಲಿ ನನಗೆ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ ಅದೇ highest ತೋರಿಸುತ್ತಾರೆ. ಇಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡತಕ್ಕಂಥದ್ದು ಏನೆಂದರೆ, ಕಳೆದ ವಿಧಾನಸಭೆ ಕಲಾಪದಲ್ಲಿ ಮಾತನಾಡುತ್ತಾ ತಾವು, ನಮ್ಮ ಕಾರ್ಖಾನೆ ಮಾಲೀಕರು ಈ ಕಾನೂನನ್ನೇನು ನಾವು ತಂದಿದ್ದೇವೆ, ಈ ಕಾನೂನಿನ ಹಲವಾರು section ಗಳೇನಿವೆ, section 9, 10, 11, 12, 13, ನೀವು ಇಲ್ಲಿ 5–6 sections quote ಮಾಡಿದ್ದೀರಿ, ಇದನ್ನೆಲ್ಲ ನಾವು ಅವರ ಮೇಲೆ ಹಾಕುವುದರ ಮುಖಾಂತರ ಕ್ರಮ ತೆಗೆದುಕೊಂಡು ಹಣ ಕೊಡಿಸತಕ್ಕಂಥದ್ದು ನನ್ನ ಜವಾಬ್ದಾರಿ, ಈ ಸರ್ಕಾರದ ಜವಾಬ್ದಾರಿ, ನಾನು ಕೊಡಿಸಿಯೇ ಕೊಡಿಸುತ್ತೇನೆ ಎನ್ನತಕ್ಕಂಥ ವಿಷಯವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಇಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಮ್ಮ ಸಕ್ಕರೆ ಮಂತ್ರಿಗಳು ಹಲವಾರು ಹೇಳಿಕೆಗಳನ್ನು ತಾವು ಕೊಟ್ಟಿದ್ದೀರಿ. ನೀವು ಈ ವರ್ಷದ ಕಬ್ಬು ಅರೆಯಬೇಕಲ್ಲವೇ? ಕಬ್ಬು ಅರೆಯಬೇಕಾದಂಥ ಅನಿವಾರ್ಯವಾದಂಥ ಪರಿಸ್ಥಿತಿಯಲ್ಲಿ ಕಾರ್ಖಾನೆಗಳ ಮಾಲೀಕರುಗಳು ಕಾರ್ಖಾನೆಯಲ್ಲಿ ಕಬ್ಬು ಅರೆಯಲಿಕ್ಕೆ ಸಿದ್ಧವಿಲ್ಲ. ನೀವು ಗುಲಬರ್ಗಾದಲ್ಲಿ cabinet meeting ಮಾಡಿಕೊಂಡು ಬಹುಶಃ ಅಲ್ಲಿಯೇ ಭೇಟಿ ಮಾಡಿದಿರೋ, ಕಾರ್ಖಾನೆಗಳ ಮಾಲೀಕರನ್ನು ಬೆಂಗಳೂರಿಗೆ ಕರೆಸಿದ್ದಿರೋ ಅದು ನನಗೆ ಗೊತ್ತಿಲ್ಲ. ನೀವು ಅವರಿಗೆ ಗಡವು ಕೊಟ್ಟಿರಿ. ನವೆಂಬರ್ 6ನೇ ತಾರೀಖಿನಂದು High Court ಕೊಟ್ಟಿರತಕ್ಕಂಥ ಆದೇಶ, ಅದೆಲ್ಲ ಚರ್ಚೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. High Court ನವರು ಆದೇಶ ಕೊಟ್ಟಮೇಲೆ ಕಾರ್ಖಾನೆಗಳ ಮಾಲೀಕರು ಹೇಳಿದರು. ಬಹುಶಃ ಉಮೇಶ್ ಕತ್ತಿಯವರೂ ಹೇಳಿದ್ದಾರೆ. ಜೈಲಿಗೆ ಕಳುಹಿಸುತ್ತೀರಾ ಕಳುಹಿಸಿ ನನ್ನ ಕೈಯಲ್ಲಿ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಆಗುವುದಿಲ್ಲ ಕೊಡಲಿಕ್ಕೆ ಎಂದು ಹೇಳಿದ್ದಾರೆ. "Sugarcane Millers in Karnataka suspended crushing over arrears" ಎಂದು ಹೇಳಿ Business Standard

ಪತ್ರಿಕೆಯಲ್ಲಿ ಒಂದು article ಬಂದಿದೆ. ನೀವು ಹೇಳಿದ ಮೇಲೂ ಅವರು ಹೇಳುತ್ತಾರೆ. ಮೊದಲು ನೀವು crushing ಪ್ರಾರಂಭ ಮಾಡಿ ಎಂದು ಹೇಳುತ್ತೀರಿ. ಆಮೇಲೆ ಅವರಿಗೆ ನೀವು ಹೇಳಿದಿರಿ. ಇವತ್ತು ಯಾವ FRP price ಇದೆ, 2,100 ರೂಪಾಯಿಗಳನ್ನು ಏನು ಕೊಟ್ಟಿಲ್ಲ ಅದನ್ನು ತಕ್ಷಣ ಕೊಟ್ಟುಬಿಡಿ, ಕೆಲವರು 1,670 ರೂಪಾಯಿಗಳಿಂದ ಇವತ್ತು 2,000 ರೂಪಾಯಿ highest ಕೊಟ್ಟಿರುವುದು. ನನಗಿರುವ ಮಾಹಿತಿ ಪ್ರಕಾರ ಕೃಷ್ಣಾಗೆ. . . ಇವರು 2,350 ರೂಪಾಯಿ ಕೊಟ್ಟಿದ್ದಾರೆ. ಅವರೇ highest ಕೊಟ್ಟಿರುವುದು. 1,650 ರೂಪಾಯಿಗಳಿಂದ ಕೊಟ್ಟಿರತಕ್ಕಂಥದ್ದು ಶುರುವಾಗಿದೆ. ಕಳೆದ ವರ್ಷದ 2,100 ರೂಪಾಯಿ FRP ಏನಿದೆ, ಅದನ್ನು ತಕ್ಷಣ ಕೊಟ್ಟುಬಿಡಿ, ನೀವು crushing ಶುರು ಮಾಡಿ, ಇನ್ನು 200 ರೂಪಾಯಿಗಳನ್ನು ಕಾರ್ಖಾನೆ ಪ್ರಾರಂಭವಾದ ಒಂದು ತಿಂಗಳೊಳಗೆ ನೀವು ಮೊದಲನೇ ಹಂತದಲ್ಲಿ ಕೊಟ್ಟುಬಿಡಿ, ಮತ್ತೆ ಇನ್ನು 200 ರೂಪಾಯಿಗಳಿಗೆ ನೀವು 3 ವರ್ಷ ಸಮಯ ತೆಗೆದುಕೊಳ್ಳಿ, 3 ವರ್ಷಗಳಲ್ಲಿ ಹಂತ ಹಂತವಾಗಿ ಕೊಡಿ ಎನ್ನತಕ್ಕಂಥದ್ದನ್ನು ಹೇಳಿದ್ದೀರಿ ಎಂದು ಹೇಳಿ ಪತ್ರಿಕೆಯಲ್ಲಿ ಬಂದಿದೆ. ನಿನ್ನೆ ನಮ್ಮ ಗೋವಿಂದ ಎಂ.ಕಾರಜೋಳರವರು ಅದನ್ನು ಹೇಳುತ್ತಿದ್ದರು. ನನ್ನ ಪ್ರಶ್ನೆ ಇಲ್ಲಿ ಏನೆಂದರೆ, 200 ರೂಪಾಯಿಗಳನ್ನು ತಕ್ಷಣಕ್ಕೆ ಕೊಡಿ ಎಂದು ನೀವು ಹೇಳಿದ್ದೀರಿ. ಇಲ್ಲಿ ಅವರು ಪ್ರಶ್ನೆ ಏನು ಹೇಳಿದ್ದಾರೆ?ನಿಮ್ಮ South India Sugar Mills Associatioin, Karnataka, President ಆದ Pavan Kumar ಅವರೇನು ಹೇಳುತ್ತಾರೆಂದರೆ, "we are not against payment of rightful price to farmers but we are unable to pay as our sales realization was very low. We do not have money to pay them. So we have aske the State Government to come to our rescue and bail us out of the currect crisis". ಇದನ್ನು ಅವರು ಹೇಳಿಕೆ ಕೊಟ್ಟಿರುವಂಥದ್ದು ನೀವು ಹೇಳಿದ ಮೇಲೆ. ಇದನ್ನು ಯಾವ date ನಲ್ಲಿ ಕೊಟ್ಟಿದ್ದಾರೆಂದರೆ, ನಾವು ಕೊಡಲಿಕ್ಕೆ ಸಾಧ್ಯವಿಲ್ಲವೆಂದು 22 ನವೆಂಬರ್ ತಿಂಗಳಿನಲ್ಲಿ ಕೊಟ್ಟಿರತಕ್ಕಂಥ ಹೇಳಿಕೆ. ಕಾರ್ಖಾನೆಗಳ ಮಾಲೀಕರನ್ನೂ ನಾನು ಕೇಳಿದರೆ, ಯಾವುದೇ ಕಾರಣಕ್ಕೂ ನಾವು ಹಣ ಕೊಡಲಿಕ್ಕೆ ಆಗುವುದಿಲ್ಲ,

ಕೊಡುವುದೂ ಇಲ್ಲವೆಂದು ಹೇಳುತ್ತಾರೆ. ಇವತ್ತು ನಾನು ಸರ್ಕಾರಕ್ಕೆ ಮನವಿ ಮಾಡತಕ್ಕಂಥದ್ದು ಏನೆಂದರೆ, ಇವತ್ತು ನಿಮ್ಮಿಂದ ತಪ್ಪಾಗಿದೆ ಎಂದು ಹೇಳುವುದಿಲ್ಲ. ನೀವು 2,500 ರೂಪಾಯಿ ಘೋಷಣೆ ಮಾಡಿದ್ದೀರಿ. ನೀವು ಆ ತೀರ್ಮಾನ ಮಾಡಬೇಕಾದರೆ ಮೊದಲೇ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ಇದರ repercussion ಗಳೇನಾಗಬಹುದು ಎನ್ನತಕ್ಕಂಥದ್ದನ್ನು ಮೊದಲೇ ತೀರ್ಮಾನ ಮಾಡಿಕೊಳ್ಳಬೇಕಾಗಿತ್ತು. ಇವತ್ತು ಇಂಥ ಪರಿಸ್ಥಿತಿಗೆ ನೀವೇನು ಬಂದಿದ್ದೀರಿ, ಇವತ್ತು ನಿಮ್ಮದೇ ಜವಾಬ್ದಾರಿ, ಇವತ್ತು ಯಾವ ರೈತರು ಕಬ್ಬನ್ನು ಕೊಟ್ಟು ಒಂದು ವರ್ಷವಾಗಿದೆ, ನೀವು ಅವರಿಗೆ ಏನೇನು ಗಡುವು ಕೊಟ್ಟರೂ ನೀವು ಏನೇ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆಂದು ಗಡುಸು ಮಾತು ಹೇಳಿದರೂ ಯಾವುದೇ ಕಾರ್ಖಾನೆ ಮಾಲೀಕರು, ನಿಮ್ಮ ಒಂದು ಕಾನೂನಿಗ, ನಿಮ್ಮ ಗಡುಸು ಮಾತುಗಳಿಗೆ, ನಿಮ್ಮ section ಗಳೇನು ಇಟ್ಟುಕೊಂಡಿದ್ದೀರಿ, ಅದೆಲ್ಲವನ್ನೂ ಎದುರಿಸಿ ನಿಲ್ಲುತ್ತೇವೆ ಎನ್ನತಕ್ಕಂಥ ದೃಢತೆಯನ್ನು ಅವರಲ್ಲಿ ಇಟ್ಟುಕೊಂಡಿದ್ದಾರೆನ್ನುವುದು ನಾನು ಅವರ ಚರ್ಚೆಗಳನ್ನು ನೋಡಿದಾಗ ಕಾಣುತ್ತಿರುವುದು. ನೀವು ಇಲ್ಲಿ ಪ್ರತಿಭಟನೆ ನಡೆಸಬಹುದು, ರೈತರು ಪ್ರತಿಭಟನೆ ನಡೆಸಬಹುದು. ಆದರೆ, ಅಂತಿಮವಾಗಿ ಯಾವ ರೈತರಿಗೆ ಇವತ್ತು ಹಣ ದೊರಕಬೇಕು, ದೊರಕಲಿಕ್ಕೆ ಸಾಧ್ಯವಿದೆಯೇ? ಇವತ್ತು ಇಂಥ ಪರಿಸ್ಥಿತಿಗೆ ನಾವೇಕೆ ಬಂದಿದ್ದೇವೆ? ಬಹುಶಃ ಸಿದ್ದರಾಮಯ್ಯನವರು 95–96 ರಲ್ಲಿ ಆರ್ಥಿಕ ಸಚಿವರು ಆಗಿದ್ದರು. ಆವತ್ತು ಬೆಳಗಾವಿಯಲ್ಲಿ ಕಾರ್ಖಾನೆಗಳು ಇಷ್ಟು ಇರಲಿಲ್ಲ. ಅವತ್ತು 5–6 ಕಾರ್ಖಾನೆಗಳು ಇದ್ದವು. ಎಷ್ಟು ಇದ್ದವೋ ಗೊತ್ತಿಲ್ಲ. ಉಮೇಶ್ ಕತ್ತಿಯವರು ಹೇಳಬೇಕು. ಕಾರ್ಖಾನೆಗಳು ಇರಲಿಲ್ಲ. ಕಬ್ಬು ಬೆಳದರು. ಕಬ್ಬು crush ಮಾಡಲಿಕ್ಕಾಗಲಿಲ್ಲ. ಕೊನೆಗೆ ನೀವೇ ಆರ್ಥಿಕ ಸಚಿವರಾಗಿ ಮಹಾರಾಷ್ಟ್ರಕ್ಕೆ transportation ಮಾಡಲಿಕ್ಕೆ ಅವತ್ತು ಆರ್ಥಿಕ ನೆರವು ಕೊಟ್ಟಂಥ ದಿನಗಳನ್ನೂ ನಾನು ಜ್ಞಾಪಿಸಿಕೊಳ್ಳಬಯಸುತ್ತೇನೆ. 95–96ರಲ್ಲಿ total ರಾಜ್ಯದಲ್ಲಿ 22. ಆದ್ದರಿಂದ ಅವತ್ತು ನೀವು ಆ ರೈತನನ್ನು ಉಳಿಸತಕ್ಕಂಥ ಕೆಲಸಕ್ಕೆ ಏನು ನಿರ್ಧಾರ ಮಾಡಿದಿರಿ, ಇವತ್ತೂ ನಾನು ಹೇಳಬಯಸುತ್ತೇನೆ, ಕಾರ್ಖಾನೆ ಮಾಲೀಕರಿಂದ ನೀವು ಆಮೇಲೆ ಏನು

ಬೇಕಾದರೂ ಮಾಡಿ. ಕಳೆದ ವಿಧಾನಸಭೆ ಕಲಾಪದಲ್ಲಿ, ಕಾರ್ಖಾನೆಗಳ ಆಸ್ತಿಗಳನ್ನು ಜಪ್ತಿ ಮಾಡಿಯಾದರೂ ಹಣ ಕೊಡಿಸುತ್ತೇವೆಂದು ಹೇಳಿದ್ದೀರಿ. ನೀವು ಜಪ್ತಿಯನ್ನು ನಿಧಾನಕ್ಕೆ ಮಾಡಿಕೊಳ್ಳಿ. ನಿಮ್ಮ ಕಾನೂನು ಚೌಕಟ್ಟಿನಲ್ಲಿ ಅವರು ಕೋರ್ಟ್‌ಗೆ ಹೋಗಬಹುದು, ಕೋರ್ಟ್‌ನಲ್ಲಿ stay ತರಬಹುದು, ಇಲ್ಲ, ನೀವು ಜಪ್ತಿ ಮಾಡುವುದಕ್ಕೆ ಕಾರ್ಖಾನೆಯೊಳಗೆ ಎಷ್ಟು sugar ಇಟ್ಟುಕೊಂಡಿದ್ದಾರೋ ನಮಗೆ ಗೊತ್ತಿಲ್ಲ. Sugar ಎಲ್ಲವನ್ನೂ ಮಾರಾಟ ಮಾಡಿಕೊಂಡಿದ್ದಾರೋ, ಏನೋ?

ಶ್ರೀ ವೈ.ಎಸ್.ವಿ.ದತ್ತಾ: 96–96ರಲ್ಲಿ 22 ಎಂದು ಹೇಳಿದಿರಲ್ಲ, ಆ time ನಲ್ಲಿ ನಮ್ಮಲ್ಲಿ, ನಮ್ಮ ರಾಜ್ಯದಲ್ಲಿ ಕಬ್ಬನ್ನು crush ಮಾಡುವುದಕ್ಕೆ factory ಗಳಿಲ್ಲವೆಂದು ಬೆಂಕಿ ಹಾಕಿ ಸುಡುವಂಥ ಪರಿಸ್ಥಿತಿ ಬಂದಿತ್ತು. ಆಗಿನ Central Government ಆಗ ನಮಗೆ ಹೆಚ್ಚು ಹೊಸ ಕಾರ್ಖಾನೆಗಳಿಗೆ ಅನುಮತಿ ಕೊಟ್ಟಿದ್ದರಿಂದಲೇ ಇಷ್ಟೊಂದು ಕಾರ್ಖಾನೆಗಳು ಆಗಿರುವುದು. ಅದೂ ಕೂಡ ಕತ್ತಿಯವರು ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ದತ್ತಾರವರೆ, ಅನುಮತಿ ಕೊಟ್ಟಿರಲಿಲ್ಲ. ದೇವೇಗೌಡರವರು ಪ್ರಧಾನಮಂತ್ರಿಯಾದ ಮೇಲೆ ಕೊಟ್ಟಿದ್ದು ಎಂದು ಹೇಳಿ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ: 96 ಎಂದರೆ ಅರ್ಥವಾಗುತ್ತದೆ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ: ದೇವೇಗೌಡರು ರಾಜ್ಯದಲ್ಲಿ 11 ಕಾರ್ಖಾನೆಗಳಿಗೆ permission ಕೊಟ್ಟರು.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್(ಸಹಕಾರ ಸಚಿವರು): ಆಗ free ಮಾಡಿದ್ದರಿಂದ ಏನಾಗಿದೆ ಎಂದರೆ ಕಬ್ಬು ಬೆಳೆಯುವವರ ಸಂಖ್ಯೆ ಜಾಸ್ತಿಯಾಗಿ ಸಕ್ಕರೆ ಬೆಲೆ ಕೆಳಗೆ ಬಿದ್ದುಹೋಗಿಬಿಟ್ಟಿದೆ.

ಶ್ರೀ ವೈ.ಎಸ್.ವಿ.ದತ್ತಾ: ಏನೆಂದರೆ, ನಾನೇಕೆ ಹೇಳುತ್ತಿದ್ದೇನೆಂದರೆ, ಕೇಂದ್ರ ಸರ್ಕಾರಗಳಿಗೂ ರೈತರ ಪರ ಧೋರಣೆ ಇರಬೇಕು. ಪಾಸ್ವಾನ್‌ರವರು statement ಕೊಟ್ಟರು. ನಿನ್ನೆ Parliament ನಲ್ಲಿ ನೋಡಿದಾಗ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕೇಂದ್ರಸರ್ಕಾರಕ್ಕೂ ರೈತ ಪರ ಧೋರಣೆ ಇಲ್ಲದೇ ಹೋದರೆ ಇಂಥ statement ಗಳು ಬರುತ್ತವೆ. ಆಗಲೂ ಕೂಡ Central Government ಗೆ ರೈತಪರ ಧೋರಣೆ ಇರಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): Parliament ನಲ್ಲಿ ಚರ್ಚೆ ಮಾಡುವುದಕ್ಕೆ ಹೇಳಿ. ನಿಮ್ಮ MP ಗಳೇನು ಮಾಡುತ್ತಾರೆ?

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ನಿಮ್ಮ M.P. ಗಳೇನು ಮಾಡುತ್ತಾರೆ.. ಬಿಜೆಪಿ ಸರ್ಕಾರ ಅಲ್ಲಿ ಏನು ಮಾಡುತ್ತಿದೆ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ದಾಖಲೆ ಸರಿಯಾಗಿ ಹೇಳಿ. ಯಾವ ಸರ್ಕಾರವೂ ಕೊಟ್ಟಿಲ್ಲ. ಯಾವ ಸರ್ಕಾರ ಕೊಟ್ಟಿದೆ ಹೇಳಿ? ... ಕೇಂದ್ರ ಸರ್ಕಾರದ ನೀತಿ ಪ್ರಕಾರ Sugar Control Act . . .

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಬಿಜೆಪಿ ರೈತರ ಪರ ಎನ್ನುತ್ತಾರಲ್ಲ, ನಿಮ್ಮದೇ majority ಇದೆಯಲ್ಲ. ನೀವು ಯಾಕೆ ಅಲ್ಲಿ ಕೇಳಬಾರದು?

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ದತ್ತರವರಿಗೆ ಅವಕಾಶ ಸಿಕ್ಕಿಲ್ಲ. ಅಲ್ಲೇನಾದರೂ ಒಂದು ಬೆಂಕಿ ಹಾಕಿ ಇದನ್ನು disturb ಮಾಡಬೇಕೆನ್ನತಕ್ಕಂಥ ಒಂದೇ ಉದ್ದೇಶ.

(ಗೊಂದಲ)

ಶ್ರೀ **ವೈ.ಎಸ್.ವಿ.ದತ್ತಾ:** ದತ್ತಾ ಬೆಂಕಿ ಹಾಕುವುದಿಲ್ಲ, ಬೆಳಕು ಚೆಲ್ಲುತ್ತಾನೆ.

(ಗೊಂದಲ)

ಶ್ರೀ **ಬಸವರಾಜ್ ಬೊಮ್ಮಾಯಿ:** ಕೇಂದ್ರ ಸರ್ಕಾರ Sugar Control Act ಪ್ರಕಾರ ವೈಜ್ಞಾನಿಕವಾಗಿ ಘೋಷಣೆ ಮಾಡುತ್ತದೆ... ಬೆಂಬಲ ಬೆಲೆಗೆ ಯಾವುದೇ ಹಣಕಾಸಿನ ಸಹಾಯ ಮಾಡಿಲ್ಲ. ಅದನ್ನೇ ಅವರು ಪುನರುಚ್ಚಾರ ಮಾಡಿದ್ದಾರೆ. ಆದ್ದರಿಂದ ದಾಖಲೆಗಳು ಸರಿ ಹೋಗಬೇಕು.

ಶ್ರೀ **ಹೆಚ್.ಡಿ.ರೇವಣ್ಣ:** ಮಾನ್ಯ ಜಗದೀಶ್ ಶೆಟ್ಟರ್‌ರವರು ಪಾರ್ಲಿಮೆಂಟಿಗೆ ಹೋಗಿ ಮಾತನಾಡಿ ಎಂದು ಹೇಳಿದರು. 17 ಜನ ಎಂ.ಪಿ.ಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಇಲ್ಲಿ ವಿಧಾನ ಸೌಧವನ್ನು ಮುತ್ತಿಗೆ ಹಾಕುವ ಬದಲು ಪಾರ್ಲಿಮೆಂಟಿಗೆ ಹೋಗಿ ಅಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲವೆ?

(ಗೊಂದಲ)

ಶ್ರೀ **ಬಸವರಾಜ್ ಬೊಮ್ಮಾಯಿ:** ಇದು ಪಾರ್ಲಿಮೆಂಟ್ ಅಲ್ಲ, ರಾಜ್ಯ ಸರ್ಕಾರ ಕೊಟ್ಟಂಥ ತೀರ್ಮಾನ ಇದೇನು ಪಾರ್ಲಿಮೆಂಟ್‌ನಲ್ಲಿ ತೀರ್ಮಾನವಾಗಿತ್ತೆ?

(ಗೊಂದಲ)

ಶ್ರೀ **ಸಿ.ಟಿ.ರವಿ:** ಇದನ್ನು ಬಗೆಹರಿಸಬಹುದಾಗಿತ್ತು. ನಿಮಗೆ ಏಕೆ ಬೇಕು ಈ ವ್ಯವಹಾರ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ರೇವಣ್ಣನವರು ಎಡವಟ್ಟು ಮಾಡಿಕೊಂಡಿದ್ದಾರೆ, ಈ ತೀರ್ಮಾನ ಪಾರ್ಲಿಮೆಂಟ್‌ನಲ್ಲಿ ಆಗಿದೆಯೇ? ಇಲ್ಲಿ ಆಗಿರುವುದು ಅದಕ್ಕೇ ಕೇಳುತ್ತಿದ್ದೇವೆ. ತೀರ್ಮಾನ ಆಗಿದ್ದು ಇಲ್ಲಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಇಲ್ಲಿ ನೀವೇನು ಅಡ್ಜೆಸ್ಟ್ ಮಾಡಿಕೊಳ್ಳುವುದಕ್ಕೆ ಹೋದರೆ ಉಳಿದವರು ಬಿಡುವುದಿಲ್ಲ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ನಾವು ಯಾರೂ ಅಡ್ಜೆಸ್ಟ್ ಮಾಡಿಕೊಳ್ಳುವುದಿಲ್ಲ ನೀವು ಬೇಕಾದರೆ ಮಾಡಿಕೊಳ್ಳುತ್ತೀರಿ.

(ಗೊಂದಲ)

ಶ್ರೀ ಹೆಚ್.ಟಿ.ಸೋಮಶೇಖರ್: ರೇವಣ್ಣನವರು ಹೇಳುವುದು ಸತ್ಯವಿದೆ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ರೇವಣ್ಣ ಎಲ್ಲಾ ಪಾರ್ಟಿಯ ಪ್ಲೇಯರ್.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ನಾನು ಒಂದೇ ಪಾರ್ಟಿಯಲ್ಲಿರುವುದ ಅಲ್ಲಿ ಇಲ್ಲಿ ಅಡ್ಡಾಡುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದು ಬಿ. ನ್ಯಾಮಗೌಡ: 2006ಕ್ಕಿಂತ ಮುಂಚೆ ಸಕ್ಕರೆ ಕಾರ್ಖಾನೆಗೆ ಲೈಸನ್ಸ್ ತರುವುದು ಬಹಳ ಕಷ್ಟವಿತ್ತು. ಒಂದು ಲೈಸನ್ಸ್ ತರಬೇಕಾದರೆ 2–3–4 ವರ್ಷ ಹೋಗುತ್ತಿತ್ತು. ಮಹಾರಾಷ್ಟ್ರದಲ್ಲಿ ಯಾರಾದರೂ ಸಕ್ಕರೆ ಫ್ಯಾಕ್ಟರಿಗೆ ಲೈಸೆನ್ಸ್ ತಂದರೆ ಊರಿನಲ್ಲಿ ಆ MLA ಗೆ, ಆ ಲೀಡರ್‌ಗೆ ದೊಡ್ಡ ಮೆರವಣಿಗೆ ಮಾಡಿಕೊಂಡು ಕರೆದುಕೊಂಡು ಹೋಗುತ್ತಿದ್ದಂಥ ಪರಿಸ್ಥಿತಿ ಇತ್ತು. ಮಾನ್ಯ

ದೇವೇಗೌಡರವರು ಪ್ರಧಾನ ಮಂತ್ರಿಯಾಗಿದ್ದಾಗ ಲೈಸನ್ಸ್ ಕೊಡುವ ಪದ್ಧತಿಯನ್ನು ಎಲ್ಲಾ ಪೂರ್ತಿಯಾಗಿ ತೆಗೆದು ಬಿಟ್ಟರು. ಆದ್ದರಿಂದ ಇಷ್ಟು ಸಕ್ಕರೆ ಕಾರ್ಖಾನೆಗಳು ಬರುವುದಕ್ಕೆ ಸಾಧ್ಯವಾಯಿತು. ಇಲ್ಲದಿದ್ದರೆ ಕಬ್ಬು ಸುಟ್ಟಂತಹ ಉದಾಹರಣೆಗಳು ಸಾಕಷ್ಟು ಇದ್ದವು. ಪ್ರಧಾನ ಮಂತ್ರಿಯಾಗಿ ಮಾನ್ಯ ದೇವೇಗೌಡರವರು ಬಂದ ನಂತರ ಆ ಲೈಸನ್ಸ್ ತೆಗೆದಾದ ಮೇಲೆ, ನಮಗೆ ಸಕ್ಕರೆ ಕಾರ್ಖಾನೆ ತೆಗೆಯಲಿಕ್ಕೆ ಪರ್ಮಿಷನ್ ಕೊಡಿ ಎಂದು ಖಾಲಿ ಅರ್ಜಿ ಕೊಟ್ಟು ಬಿಟ್ಟರೆ ಸಾಕು ಕೊಡುತ್ತಿದ್ದರು ಅವರು ಅನುಕೂಲ ಮಾಡಿಕೊಟ್ಟರು. ಹೀಗಾಗಿ ಇಷ್ಟು ಸಕ್ಕರೆ ಕಾರ್ಖಾನೆಗಳು ಬಂದಿವೆ.

ಶ್ರೀ ಬಸವರಾಜ್ ಬೊಮ್ಮಾಯಿ: Sugar ಎಂದರೆ international trade ಮೇಲೆ direct repercussion ಆಗುವಂಥ ಒಂದು ವಸ್ತು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಒಂದು ನಿಮಿಷ ತಾವು ಸುಮ್ಮನೆ ಕುಳಿತುಕೊಳ್ಳಿ. ಆಗ ಎಸ್.ಆರ್.ಬೊಮ್ಮಾಯಿರವರು HRD Minister ಇದ್ದರು, ಅವರು ಒಳ್ಳೆಯ ಸಲಹೆ ಕೊಟ್ಟು ಮಾಡಿದ್ದಾರೆ. ಆ credit ಬೊಮ್ಮಾಯಿರವರಿಗೆ ಸಲ್ಲುತ್ತದೆ. ಈಗ ನೀನು ಉಲ್ಟಾ ಹೊಡೆದರೆ ಹೇಗೆ? ದೇವೇಗೌಡರವರು ಮಾಡಿರುವುದು ಸತ್ಯ. ಅದನ್ನು ಒಪ್ಪಿಕೊಳ್ಳುವುದಕ್ಕೆ ನಿಮಗೇನು ತೊಂದರೆ? Your father is part of it.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ದೇವೇಗೌಡರವರು ಪ್ರಧಾನಿಯಾಗಿದ್ದಾಗ ಅಜಿತ್ ಸಿಂಗ್ food minister ಇದ್ದಾಗ 11 ಕ್ಕೆ ಒಂದೇ ದಿವಸದಲ್ಲಿ ಲೈಸನ್ಸ್ ಕೊಟ್ಟರು. ಅದು ಸತ್ಯ fact.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: O.k. done. ಆ time ನಲ್ಲಿ ನಾನು MP ಆದವನು ಗೊತ್ತಿಲ್ಲವೇ? ನನಗೆ ಗೊತ್ತಿಲ್ಲವೆ? ಈಗ ನೀವು ಪ್ಲೇಟ್ ಉಲ್ಟಾ ಹಾಕಿದರೆ ಹೇಗೆ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ನಾನು ಈಗ ಅದನ್ನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಬಸವರಾಜಣ್ಣ ಆಗ ಏನಿತ್ತು ಅದರ ಬಗ್ಗೆ ಹೇಳುವುದು ಬೇಡವೆ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಈಗ ನೀವು ಮಾತನಾಡಿ ನಾನು ಆಮೇಲೆ ಮಾತನಾಡೋಣ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು, ನಿಮ್ಮವರು ಅಲ್ಲಿ ಎಂ.ಪಿ. ಗಳು ಇದ್ದಾರೆ ಅಲ್ಲಿ ಮಾತನಾಡಿ ಎಂದು ಹೇಳಿದರು. ಅಲ್ಲಿ ನಮ್ಮವರು ಇರುವುದು ಇಬ್ಬರೇ, ನಾವು ಏನಾದರೂ ಮಾತನಾಡಬೇಕೆಂದು ನಮ್ಮ ಎಂ.ಪಿ.ಗಳು ಕೇಳಲಿಕ್ಕೆ ಹೋದರೆ ನಮಗೆ ಅಲ್ಲಿ ಎರಡರಿಂದ ಮೂರು ನಿಮಿಷ ಕಾಲಾವಕಾಶ ಕೊಡುತ್ತಾರೆ. ಅಷ್ಟರಲ್ಲಿ ನಾವು ಅಲ್ಲಿ ಏನು ಮಾತನಾಡುವುದಕ್ಕೆ ಸಾಧ್ಯ? ಸರ್ಕಾರ ಈಗ ಅವರದ್ದೇ ಇದೆ. ಕಳೆದ ಇದೇ ಸದನದಲ್ಲಿ, ಜಗದೀಶ್ ಶೆಟ್ಟರ್‌ರವರು, ಬಸವರಾಜ್ ಬೊಮ್ಮಾಯಿಯವರು, ಗೋವಿಂದ ಕಾರಜೋಳ ರವರು ಮಾತನಾಡಿರತಕ್ಕಂಥ ಪದಗಳನ್ನು ನೆನಪಿಸಿ ಕೊಡಲಿಕ್ಕೆ ಬಯಸುತ್ತೇನೆ. ಕಳೆದ ಸದನದಲ್ಲಿ ಅವರು ಹೇಳಿಕೆ ಕೊಟ್ಟಂಥದ್ದು, ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ, ಕೇಂದ್ರದ ಕೆಲವು ನೀತಿಗಳೇನಿವೆ ಇವು ಕಬ್ಬು ಬೆಳೆಗಾರರಿಗೆ ಮಾರಕವಾಗುವ ನೀತಿಗಳು, ಅದನ್ನು ಮಾರ್ಪಾಡು ಮಾಡಿಸತಕ್ಕಂಥ ಕೆಲಸಕ್ಕೆ

ನೀವು ಪ್ರಯತ್ನ ಪಡಬೇಕು ಎನ್ನತಕ್ಕಂಥ ಮಾತನ್ನು ನೀವು ಈ ಭಾಗದಿಂದ ಗೋವಿಂದ ಕಾರಜೋಳರವರು ಹೇಳಿದಿರಿ. ಒಂದು ನಿಮಿಷ ನೀವು ಇದೇ ಸದನದಲ್ಲಿ ಹೇಳಿದಿರಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಅವರು ಮಾತನಾಡುತ್ತಾರೆ ಬಿಡಿ ಸಾರ್ ನೀವು ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: Specific ಆಗಿ ಮಾತನಾಡಿ. ನಾವು ಆ ದಿನ ಅದರ ಬಗ್ಗೆ ಏನೂ ಹೇಳಿಲ್ಲ. ಕೇಂದ್ರ ಸರ್ಕಾರದ ಬಗ್ಗೆ ಏನೂ ಮಾತನಾಡಿಲ್ಲ. Proceedings ತೆಗೆದು ನೋಡಿ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ: Proceedings copy ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಕಬ್ಬಿಗೆ ದರ ಕೊಡಿಸಿ ಎಂದರೆ ಕೇಂದ್ರ ಸರ್ಕಾರದ ಬಗ್ಗೆ ಮಾತನಾಡುತ್ತೀರಿ, ಮಾತನಾಡಿ ಆದರೆ, ನನ್ನ ಬಗ್ಗೆ ಮಾತನಾಡುವಾಗ, ನನ್ನ statement ಬಗ್ಗೆ ಮಾತನಾಡುವಾಗ record ತೆಗೆದು ಮಾತನಾಡಿ. ಸುಮ್ಮನೇ ಹಾಗೆ vagu ಆಗಿ ಮಾತನಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಕಳೆದ ಅಧಿವೇಶನದಲ್ಲಿ ತಾವು ಮಾತನಾಡಿದ್ದೀರಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಕುಮಾರಣ್ಣ ಒಂದು ನಿಮಿಷ ಹೇಳುತ್ತೇನೆ. ನೀವು ಒಂದು ನಿಮಿಷ ಯೀಲ್ಡ್ ಆಗಿ.

(ಗೊಂದಲ)

ಉಪಾಧ್ಯಕ್ಷರು: ಅವರು ಯೀಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು ಯೀಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ನಾನು ಬೇಕಾದರೆ ಅದನ್ನು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಬೊಮ್ಮಾಯಿಯವರೆ ಆಮೇಲೆ ನೀವು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಒಂದು ನಿಮಿಷ ನಾನು ಹೇಳುತ್ತೇನೆ ತಾವು ಕುಳಿತುಕೊಳ್ಳಿ. ನಾನು ಈ ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆ ಈ ಸದನದ ಒಳಗೆ ಬರುವುದಕ್ಕಿಂತ ಮುಂಚೆ ಕಳೆದ ನವೆಂಬರ್ ತಿಂಗಳಲ್ಲಿ ಈ ಸದನದಲ್ಲಿ ಯಾರ್‍ಯಾರು ಕಬ್ಬಿನ ವಿಚಾರದಲ್ಲಿ ಏನೇನು ವಿಷಯಗಳನ್ನು ಚರ್ಚೆ ಮಾಡಿದ್ದಾರೆ, ಸದನದ proceedings ಅನ್ನು ತರಿಸಿಕೊಂಡು ಸಂಪೂರ್ಣವಾಗಿ ಓದಿ ಇವತ್ತು ಇಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಸದನದ ಕಡತದಲ್ಲಿ ಗೋವಿಂದ ಕಾರಜೋಳರವರು, ಬಸವರಾಜ ಬೊಮ್ಮಾಯಿರವರು, ಜಗದೀಶ್ ಶೆಟ್ಟರ್‌ರವರು ಏನು ಹೇಳಿದ್ದಾರೆ ಅದನ್ನೆಲ್ಲಾ ತೆಗೆಯಿರಿ. ನಾನು ಇಲ್ಲಿ ಸುಮ್ಮನೆ ಸಂತೆ ಭಾಷಣ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಅಂದು ನಾವು ಏನು ಹೇಳಿದ್ದೇವೆ ಅದಕ್ಕೆ ನಾವು ಬದ್ಧರಾಗಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನೀವು ಅಂದು ಕೇಂದ್ರ ಸರ್ಕಾರದ ನೀತಿಯ ಬಗ್ಗೆ ಹೇಳಿದಿರಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ನೀವು ನನ್ನ ಹೆಸರನ್ನು ತೆಗೆದುಕೊಂಡು ಹೇಳಿದಿರಿ. ಹೀಗಾಗಿ ಹೇಳುತ್ತೇನೆ ಒಂದು ನಿಮಿಷ ಕೇಳಿ.

(ಗೊಂದಲ)

ಉಪಾಧ್ಯಕ್ಷರು: ಕಡತ ತರಿಸಿ ನೋಡೋಣ ಬಿಡಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಅವತ್ತು ಏನು ಹೇಳಿದ್ದೇವೆ ಅದು ಕಡತದಲ್ಲಿದೆ. ಕಡತದಲ್ಲಿ ಏನಿದೆ ಅದಕ್ಕೆ ನಾವು ಬದ್ಧರಿದ್ದೇವೆ. ಕೇಂದ್ರ ಸರ್ಕಾರ ಏನು ಮಾಡಬೇಕೆಂದು ಆವತ್ತು ಬಯಸಿದ್ದೆವು ಇವತ್ತು ಬಯಸಿದ್ದೆವು, ಕೇಂದ್ರದಲ್ಲಿ ನಮ್ಮ NDA ಸರ್ಕಾರ ಬಂದ ಮೇಲೆ ಮಾನ್ಯ ನರೇಂದ್ರ ಮೋದಿಯವರು ಪ್ರಧಾನಿಯಾದ ಮೇಲೆ ಮತ್ತು ನಮ್ಮ ರಾಂ ವಿಲಾಸ್ ಪಾಸ್ವಾನ್ ರವರು ಇದರ ಸಚಿವರಾದ ಮೇಲೆ import sugarಗೆ 18% ಇದ್ದದ್ದು 40%ಗೆ ಏರಿಸಿದ್ದಾರೆ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಅವರು ಬಂದ ಮೇಲೆ ಮೆಕ್ಕೆಜೋಳ ಬಂದ್ ಆಗಿದೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್(ಮಾನ್ಯ ಸಹಕಾರಿ ಹಾಗೂ ಸಕ್ಕರೆ ಸಚಿವರು): ಇದು wrong statement, ಮಾನ್ಯ ಮುಖ್ಯಮಂತ್ರಿಗಳೆ ಹೋಗಿ ಭೇಟಿ ಮಾಡಿ ಬಂದ ನಂತರವೂ ಇನ್ನು 25%ಗೆ ಆದೇಶ ಆಗಿಲ್ಲ. 40%ಗೆ ಆಗಿದೆ ಎಂದು ಹೇಳಿದರೆ ಹೇಗ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: Export ಗೆ ಸಬ್ಸಿಡಿಯನ್ನು ಕೊಡಿಸಿದ್ದಾರೆ. World trade ಅನ್ನು ಮಾಡುವ ಸಲುವಾಗಿ ಮಾಡಿದ್ದಾರೆ.

(ಗೊಂದಲ)

ಶ್ರೀ ಎಸ್.ಟಿ.ಸೋಮಶೇಖರ್: ಸುಳ್ಳು, ಸುಳ್ಳು, ಮುಖ್ಯಮಂತ್ರಿಗಳು ಹೇಳುವುದನ್ನು ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಬೊಮ್ಮಾಯಿ ಸಾಹೇಬ್ರು ಸುಳ್ಳು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಇನ್ನೂ 25%ಗೆ ಆದೇಶವಾಗಿಲ್ಲ. 40% ಆಗಿದೆ ಎಂದು ಹೇಗೆ ಹೇಳುತ್ತೀರಿ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: 18% ಇದ್ದದ್ದು 40% ಗೆ ಹೆಚ್ಚಿಗೆ ಮಾಡುವುದಕ್ಕೆ..

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ: Central Government ನ proceedings copy ಇದೆ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಅದನ್ನು ಓದಿ.

ಉಪಾಧ್ಯಕ್ಷರು: ತಾವು ಮುಗಿಸಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಕೇಂದ್ರ ಸರ್ಕಾರ ಬಂದ ಮೇಲೆ 18%ಗೆ ಏರಿಸಿದ್ದಾರೆಂದು ಹೇಳಿದರು. ನಾನು ಅದನ್ನು ಓದಿ ಬಿಡುತ್ತೇನೆ. "Sugar industry has sought financial help and other assistance from the Government following surplus sugar availability. Lokasabha was informed today. Food Minister Ram Vilas Paswan said during question hour that representations from associations of sugar industry have been received by the Government seeking assistance primarily in the form of a hike upto 40% in duty on import of sugar and continue of export incentive scheme for raw sugar export for the sugar season 2014-15. Creation of strategic sugar straws, mandatory ethanol blending at 10% and increase in ethanol procurement price, diversion of excise sugar to produce ethanol through B-molasses and participation of State Governments in cane price payment over and above fair and remunerative price of sugarcane are some of the other demands he said.

Paswan said import duty on sugar has already been increased from 15% to 25% and it has not been found feasible to create strategic sugar stocks." ಇವರು ಹೇಳುತ್ತಾರೆ "25% with effect from August 20th and it has not been found feasible to create strategic sugar straws". ಇದನ್ನು ಇವರು ಹೇಳುತ್ತಾರೆ, 25% ಮಾಡಿದ್ದಾರೆ 40% ಮಾಡಿಲ್ಲ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: 15% ರಿಂದ 25% ಗೆ increase ಮಾಡಿದ್ದರಲ್ಲ. ಮತ್ತೆ ಆ credit ಆದರೂ ಕೊಡಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಆಗ 40 ಎಂದು ಹೇಳಿದಿರಿ, 25% ಎಂದು ಈಗ ಹೇಳುತ್ತೀರಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: 40ಕ್ಕೆ ಇತ್ತು ನಿಜ ಈಗ 25ಕ್ಕೆ exports ಗೆ ಸಬ್ಸಿಡಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ, ಅದಕ್ಕಾದರೂ ನಮಗೆ credit ಕೊಡಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ನೀವು ಸುಳ್ಳು ಹೇಳಿದಿರ ಅದಕ್ಕೇ ಹೇಳಿದ್ದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಬಸವರಾಜ ಬೊಮ್ಮಾಯಿರವರು ಸುಳ್ಳು ಬೊಮ್ಮಾಯಿಯೋ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಏನೂ ಮಾಡಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಎಲ್ಲಾ ಸರ್ಕಾರಗಳು ಮಾಡಿವೆ. ಒಂದು ಸರ್ಕಾರ ಎಂದು ಆ credit ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಲ್ಲಾ ಪಕ್ಷಗಳ ಸರ್ಕಾರಗಳು ಮಾಡಿವೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ನೋಡಿ ಬಸವರಾಜ ಬೊಮ್ಮಾಯಿರವರೆ, 15% ನಿಂದ 25%ಗೆ ಏರಿಕೆ ನೀವು ಮಾಡಿದಿರಿ, ಅದು ಈಗ ಏನಾಯಿತು? Export ಈಗ ಮಾಡುವುದಕ್ಕೆ ಆಗುತ್ತಿಲ್ಲ. ಇದು ಒಂದು. ಎರಡನೇ ಅಂಶ

ಏನೆಂದರೆ, let me be allowed to speak. Price ಅನ್ನು 100 ರೂಪಾಯಿ ಜಾಸ್ತಿ ಮಾಡಿತು. ರಾಜ್ಯ ಸರ್ಕಾರಕ್ಕೆ incentive ಕೊಟ್ಟಿದ್ದಾರೆಯೆ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ರಾಯರೆಡ್ಡಿಯವರೆ, trade ಎನ್ನುವುದು demand and supply ಮೇಲೆ ಅವಲಂಬಿತವಾಗಿರುತ್ತದೆ. ಸರ್ಕಾರ ವ್ಯಾಪಾರ ಮಾಡುವುದಕ್ಕೆ ಆಗುವುದಿಲ್ಲ ಇದು ನಿಮಗೂ ಗೊತ್ತಿದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಹಾಗಾದರೆ ರಾಜ್ಯ ಸರ್ಕಾರಕ್ಕೆ ₹ 200/- ಗಳನ್ನು ಕೊಡಿಸಿ. ರೈತರಿಗೆ ನೇರವಾಗಿ ಕೊಡಿಸಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಅದಕ್ಕೆ ಏನು facility ಬೇಕು ಸರ್ಕಾರಗಳು ಕೊಡುತ್ತವೆ. ಈಗ 15 to 25% import duty ಹೆಚ್ಚಿಗೆ ಮಾಡಿದ್ದಾರೆ. So that ಈಗ import ಗೆ discourage ಮಾಡಿದ್ದಾರೆ. ನಾವು ಬೆಳೆದಂಥ ಕಬ್ಬಿಗೆ ಸ್ವಲ್ಪ ಬೆಲೆ ಬರಲಿ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಮಾಡಿದಿರಿ. ಹಾಗಾದರೆ ರಾಜ್ಯ ಸರ್ಕಾರಕ್ಕೆ 200 ರೂಪಾಯಿಗಳ incentive ಅನ್ನು ನೇರವಾಗಿ ರೈತರಿಗೆ ಕೊಡಿಸಿ. ಕೇವಲ price fix ಮಾಡಿದರೆ ಆಗುತ್ತದೆಯೇ? ಕೇಂದ್ರ ಸರ್ಕಾರ ಏತಕ್ಕಾಗಿ ಕೊಡಬಾರದು?

ಶ್ರೀ ಬಸವರಾಜ್ ಬೊಮ್ಮಾಯಿ: ಮತ್ತೇನು ಮಾಡಬೇಕು?

ಶ್ರೀ ಬಸವರಾಜ ರಾಯರೆಡ್ಡಿ: Let them give. ಒಂದು ಟನ್ ಕಬ್ಬಿಗೆ 200 ರೂಪಾಯಿ ಕೊಡಿಸಿ.

ಶ್ರೀ ಬಸವರಾಜ್ ಬೊಮ್ಮಾಯಿ: ಕೇಂದ್ರ ಸರ್ಕಾರ ಕಾನೂನು ಪ್ರಕಾರ FRP ಮಾಡಿದೆ. ಇದನ್ನು ಹಿಂದಿನ ಯುಪಿಎ ಸರ್ಕಾರ ಮತ್ತು ಈಗ ಈ ಸರ್ಕಾರ ಕೂಡ ಕೇಂದ್ರದಲ್ಲಿ ಮಾಡಿದೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾಡಿಲ್ಲವೆಂದು ನಾವು ಹೇಳುತ್ತಿಲ್ಲ. ಈಗ ನೀವು ಮಾಡಿ ಎಂದು ಹೇಳುತ್ತಿದ್ದೇವೆ. ಇದನ್ನು ನೀವು ಏತಕ್ಕೆ ಮಾಡಬಾರದು?

ಶ್ರೀ ಬಸವರಾಜ್ ಬೊಮ್ಮಾಯಿ: ಪ್ರಶ್ನೆ ಇರತಕ್ಕಂಥದ್ದು ಏನೆಂದರೆ, FRP ಮೇಲೆ SAP ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಕೋರ್ಟ್ ಕೂಡ ಹೇಳಿದೆ. SAP ಪ್ರಕಾರ ನೀವು 2,500 ರೂಪಾಯಿ ಮಾಡಿದ್ದೀರಿ. ನೀವೇ ಮಾಡಿರುವಂಥದ್ದನ್ನು ನೀವೇ ಪಾಲನೆ ಮಾಡುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: SAP ಪ್ರಕಾರ ರಾಜ್ಯ ಸರ್ಕಾರ 150 ರೂಪಾಯಿ ಕೊಟ್ಟಿದೆ. ಈಗ Government of India ದಿಂದ ಕೊಡಿಸಿ.

ಶ್ರೀ ಬಸವರಾಜ್ ಬೊಮ್ಮಾಯಿ: ನೀವೇ ಮಾಡಿರುವ ಆಜ್ಞೆಯನ್ನು ಪಾಲನೆ ಮಾಡುವುದಕ್ಕೆ ಆಗುತ್ತಿಲ್ಲ. ಅದನ್ನು ಬಿಟ್ಟು ಮೇಲಕ್ಕೆ ತೋರಿಸುತ್ತಿದ್ದೀರಿ.

ಶ್ರೀ ಸಿ.ಎನ್.ಬಾಲಕೃಷ್ಣ: ರೈತರ ಸ್ವತ್ತು ಬಿಜೆಪಿ ಪಕ್ಷದ್ದು ಎಂದು ಹೇಳಿದ್ದೀರಿ. ಈಗ ಮಾಡಿಸಿ ನೋಡೋಣ.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ: ಮಾನ್ಯ ರಾಯರೆಡ್ಡಿಯವರೇ, ದಯವಿಟ್ಟು ಕುಳಿತುಕೊಳ್ಳಿ. ಮೊದಲು ಮಾನ್ಯ ಕುಮಾರಸ್ವಾಮಿಯವರು ಮಾತನಾಡಲಿ. ಆನಂತರ ನೀವು ಮಾತನಾಡಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಈಗ ರಾಜ್ಯ ಸರ್ಕಾರ 150 ರೂಪಾಯಿ ಕೊಟ್ಟಿದೆ. ಈಗ ಕೇಂದ್ರ ಸರ್ಕಾರ 200 ರೂಪಾಯಿ ಕೊಡುವುದಕ್ಕೆ ಹೇಳಿ.

ಶ್ರೀ ಬಸವರಾಜ್ ಬೊಮ್ಮಾಯಿ: 2,500 ರೂಪಾಯಿ ಕೊಡುವುದಕ್ಕೆ ಆದೇಶ ಮಾಡಿದ್ದು ರಾಜ್ಯ ಸರ್ಕಾರ ತಾನೇ? ನಿಮ್ಮ ಆದೇಶವನ್ನು ನೀವು ಪಾಲನೆ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ಇದನ್ನು ಬಿಟ್ಟು ಬೇರೇನೂ ಹೇಳುತ್ತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಕೇಂದ್ರ ಸರ್ಕಾರ ಒಂದು ರೂಪಾಯಿ ಸಹ ರೈತರಿಗೆ ಕೊಡುತ್ತಿಲ್ಲ. ಆದ್ದರಿಂದ, ರೈತರ ಪರವಾಗಿ ಮಾತನಾಡುವ ನೈತಿಕ ಹಕ್ಕು ಬಿಜೆಪಿಗೆ ಇಲ್ಲ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಮಧ್ಯೆ ಮಧ್ಯೆ ಈ ರೀತಿ ಮಾತನಾಡಿದರೆ ಹೇಗೆ? ಮೊದಲು ಮಾನ್ಯ ಕುಮಾರಸ್ವಾಮಿಯವರು ಮಾತನಾಡಲಿ.

ಉಪಾಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ, ತಾವು ಮಾತನಾಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಚರ್ಚೆ ಬೇರೆ ಬೇರೆ ರೀತಿಯಲ್ಲಿ ಎಲ್ಲೆಲ್ಲೋ ಹೋಗುತ್ತಿದೆ. ಆದ್ದರಿಂದ, ಊಟ ಮಾಡಿ ಮತ್ತೆ ಚರ್ಚೆಯನ್ನು ಪ್ರಾರಂಭ ಮಾಡೋಣ.

ಉಪಾಧ್ಯಕ್ಷರು: ಆಯಿತು. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 1 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ನಿಶ್ಚಯಿಸಿತು)

ಸದನವು ಪುನಃ ಮಧ್ಯಾಹ್ನ 3 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು

(ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿಯವರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ನಿಯಮ 192ರ ಅಡಿಯಲ್ಲಿ ಹಕ್ಕುಚ್ಯುತಿ ನಿರ್ಣಯವನ್ನು ತಂದಿದ್ದೇನೆ.

ಉಪಾಧ್ಯಕ್ಷರು: ಕಾನೂನು ಸಚಿವರು ಸೀಟಿನಲ್ಲಿ ಇಲ್ಲ. ಅವರು ಬಂದಾಗ ಕೇಳಿದರೆ ಅನುಕೂಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಸಚಿವರು ಯಾರೂ ಸೀಟಿನಲ್ಲಿ ಇಲ್ಲ. ಇಬ್ಬರು ಸಚಿವರು ಮಾತ್ರ ಸೀಟಿನಲ್ಲಿ ಇದ್ದಾರೆ. ತಾವು ಕಾನೂನು ಸಚಿವರು ಬರಲಿ ಎಂದು ಹೇಳಿದಿರಿ ಪರವಾಗಿಲ್ಲ ಅವರು ಬರಲಿ. ಆದರೆ ಉಳಿದ ಸಚಿವರೆಲ್ಲಾ ಎಲ್ಲಿ ಇದ್ದಾರೆ?

ಉಪಾಧ್ಯಕ್ಷರು: ಬರುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮೊದಲನೇ ಸಾಲಿನಲ್ಲಿ ಮಾನ್ಯ ಜಾರ್ಜ್‌ರವರು ಒಬ್ಬರು ಇದ್ದಾರೆ. ಜಾರ್ಜ್‌ರವರು ತುದಿಗೆ ಸೇರಿದ್ದಾರೆಂದು ಎಲ್ಲರಿಗೂ ಗೊತ್ತಾಗಿದೆ.

ಶ್ರೀ ಪಿ.ರಾಜೀವ್: ಮಾನ್ಯ ಉಪಾಧ್ಯಕ್ಷರೆ, ಆಫೀಸರ್ಸ್ ಮೇಲೆ ನಂಬಿಕೆ ಇಟ್ಟೇ ಕರ್ನಾಟಕ ಈ ಪರಿಸ್ಥಿತಿಗೆ ಬಂದಿರುವುದು. ಆಫೀಸರ್ಸ್ ಮೇಲೆ ನಂಬಿಕೆ ಇಟ್ಟು ಕರ್ನಾಟಕವನ್ನು ಇಲ್ಲಿಗೆ ತಂದಿದ್ದೇವೆ. ಮಂತ್ರಿಗಳು ಇಲ್ಲಿ ಇರಬೇಕಲ್ಲವೇ?

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ಬೇಕಾದರೆ ಸದನವನ್ನು ಹತ್ತು ನಿಮಿಷ ಮುಂದೂಡಿ. ಸಚಿವರುಗಳನ್ನು ಸದನಕ್ಕೆ ಕರೆಸಿ. ಅವರು ಬರಲಿ.

ಉಪಾಧ್ಯಕ್ಷರು: Council ನಲ್ಲಿ BAC ನಡೆಯುತ್ತಿದೆ ಅದಕ್ಕಾಗಿ ಸಚಿವರುಗಳು ಅಲ್ಲಿಗೆ ಹೋಗಿದ್ದಾರೆ.

ಶ್ರೀ ಗೋವಿಂದ ಎಂ.ಕಾರಜೋಳ: ಸಚಿವರುಗಳನ್ನು ಕರೆಸಿ. ನಾವು ಬೇಕಾದರೆ ಹತ್ತು ನಿಮಿಷ ಹೊರಗಡೆ ಕುಳಿತುಕೊಳ್ಳುತ್ತೇವೆ ಏನೂ ತೊಂದರೆ ಇಲ್ಲ.

ಶ್ರೀ ಆರ್.ಅಶೋಕ್: ಮಾನ್ಯ ಉಪಾಧ್ಯಕ್ಷರೆ, ಹತ್ತು ನಿಮಿಷ ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಸರ್ಕಾರ ನಿದ್ರೆಯಲ್ಲಿದೆ ಎಂದರೆ ಯಾರೂ ಒಪ್ಪುತ್ತಿರಲಿಲ್ಲ. ಈಗ ಸರ್ಕಾರ ನಿದ್ರೆಯಲ್ಲಿದೆ ಎಂದು ಸಾಬೀತು ಮಾಡಿದ್ದಾರೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಉತ್ತರ ಕರ್ನಾಟಕದಲ್ಲಿ ಸಮಸ್ಯೆಗಳ ಬಗ್ಗೆ ಚರ್ಚೆಯಲ್ಲಿ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಆಸಕ್ತಿ ಇದೆ ಎಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಪಿ.ರಾಜೀವ್: ಹತ್ತು ದಿನಗಳ ಈ ಸದನದಲ್ಲಿ ನಮ್ಮ ಬದ್ಧತೆ ಏನು ಎನ್ನುವುದು ಗೊತ್ತಾಗುತ್ತದೆಯಲ್ಲಾ?

(ಗೊಂದಲ)

ಶ್ರೀ ಆರ್.ಅಶೋಕ್: ಹತ್ತು ನಿಮಿಷ ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಹತ್ತು ನಿಮಿಷ ಸದನವನ್ನು ಮುಂದೂಡಿ. ಉತ್ತರ ಕರ್ನಾಟಕದ ಸಮಸ್ಯೆಯ ಬಗ್ಗೆ ಎಷ್ಟು ಗಂಭೀರವಾಗಿದ್ದಾರೆ ಎಂದು ಅರ್ಥವಾಗುತ್ತಿದೆ.

(ಗೊಂದಲ)

ಉಪಾಧ್ಯಕ್ಷರು: Council ನಲ್ಲಿ BAC ನಡೆಯುತ್ತಿದೆ ಅಲ್ಲಿಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಗೃಹ ಸಚಿವರು, ಸಹಕಾರ ಸಚಿವರು ಇದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಮಾಲೀಕಯ್ಯ ವಿ. ಗುತ್ತೇದಾರ್‌ರವರೆ ಎಲ್ಲಾ ಆಕಾಂಕ್ಷಿಗಳಿಗೂ ಒಂದು ಅವಕಾಶ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸದನ ನಡೆಸುವ ಇಚ್ಛಾಶಕ್ತಿ ಇಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಸುಮ್ಮನೆ ಕಾಟಾಚಾರಕ್ಕೆ ಏಕೆ ಉತ್ತರ ಕರ್ನಾಟಕದಲ್ಲಿ ಅಧಿವೇಶನವನ್ನು ಕರೆಯುತ್ತೀರಿ? ಉತ್ತರ ಕರ್ನಾಟಕದ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲ. ಕಳಕಳಿ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ರೀತಿ ಆದರೆ ನಾವು ಸಭಾತ್ಯಾಗ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಅಧಿವೇಶನವನ್ನು ಕರೆಯುವಂತಹ ಅವಶ್ಯಕತೆಯೇ ಇರಲಿಲ್ಲ. ಉತ್ತರ ಕರ್ನಾಟಕದ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲ. ಕಳಕಳಿ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಜಾರ್ಜ್‌ರವರು ಗೃಹ ಸಚಿವರು ಈಗ ತುತ್ತತುದಿಗೆ ಸೇರಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಎಲ್ಲಾ ಆಕಾಂಕ್ಷಿಗಳು ಬನ್ನಿ. ಒಂದು ಒಳ್ಳೆಯ ಅವಕಾಶ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಈ ಸದನವನ್ನು ನಡೆಸುವಂತಹ ಇಚ್ಛಾಶಕ್ತಿ ಸಚಿವರುಗಳಿಗೆ ಇಲ್ಲ.

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. Council ನಲ್ಲಿ BAC ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಅಲ್ಲಿಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ: ನೀವು ಹೇಗೋ ಸೇರಿಕೊಂಡಿರಿ. ನಿಮ್ಮನ್ನು ನಂಬಿದವರನ್ನು ಹೇಗೋ ತೂರಿಸಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಗೃಹಸಚಿವರಿಗೆ ಸಂಬಂಧಪಟ್ಟ ಇಲಾಖೆಯದ್ದು ಬೇಡ. ನಮ್ಮ ರಕ್ಷಣೆಯನ್ನು ಅವರು ಎಷ್ಟು ಮಾಡಿದ್ದಾರೆ ಎನ್ನುವುದು ಗೊತ್ತಿದೆ. ಬೇರೆ ಸಚಿವರನ್ನು ಕರೆಯಿರಿ.

(ಗೊಂದಲ)

ಶ್ರೀ ಆರ್.ಅಶೋಕ್: ನಾವು ಯಾರಿಗೋಸ್ಕರ ಮಾತನಾಡಬೇಕು?

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸದನವನ್ನು ನಡೆಸುವಂತಹ ಇಚ್ಛಾಶಕ್ತಿ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸದನದಲ್ಲಿ ಗೃಹ ಸಚಿವರು ಇದ್ದರೂ ಅವರು ಲೆಕ್ಕಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಏಕೆಂದರೆ ಉತ್ತರ ಕರ್ನಾಟಕದಲ್ಲಿ, ಬೆಳಗಾಂನಲ್ಲಿ Law and Order problem ಇಲ್ಲ.

(ಗೊಂದಲ)

ಶ್ರೀ ಆರ್.ಅಶೋಕ್: ಮಾನ್ಯ ಉಪಾಧ್ಯಕ್ಷರೆ, ಹತ್ತು ನಿಮಿಷ ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇಲ್ಲದಿದ್ದರೆ ನಾವು ಸಭಾತ್ಯಾಗ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್.ಅಶೋಕ್: ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಇಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ವಿರೋಧ ಪಕ್ಷದ ನಾಯಕರೇ ಸೀಟಿನಲ್ಲಿ ಇಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ರಾಯರೆಡ್ಡಿಯವರೆ, ತಾವು ಮಂತ್ರಿಗಳಾದಾಗ ಮಾತನಾಡಿ.

(ಗೊಂದಲ)

ಶ್ರೀ ಎ.ಮಂಜು: ಸರ್ಕಾರ ಅಧಿಕಾರದಲ್ಲಿದ್ದಾಗ ಎಷ್ಟು ಜನ ಮಂತ್ರಿಗಳು ಬಂದು ಸದನದಲ್ಲಿ ಕುಳಿತಿರುತ್ತಿದ್ದರು?

ಶ್ರೀ ಗೋವಿಂದ ಎಂ.ಕಾರಜೋಳ: ನಿಮ್ಮನ್ನು ಅವರು ಮಂತ್ರಿ ಮಾಡುವುದಿಲ್ಲ. ನಾವು ಹೊರಗಡೆ ಹೋಗುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು: ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಅವರು ಹೊರಗೆ ಹೋಗಲಿ ಬಿಡಿ. ಮಾನ್ಯ ಕುಮಾರಸ್ವಾಮಿಯವರು ಮಾತನಾಡಲಿ.

ಉಪಾಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಪಿ.ರಾಜೀವ್(ಕುಡಚಿ): ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಈ ಸದನದಲ್ಲಿ ರೈತರ ಬಗ್ಗೆ ಮಾತನಾಡುತ್ತಿದ್ದೇವೆ. ನಾವು ರೈತರ ಬಗ್ಗೆ ಚುನಾವಣಾ ಪ್ರಚಾರಕ್ಕಾಗಿ ಮಾತನಾಡುತ್ತಿದ್ದೇವಾ ಇವತ್ತು ಸದನದಲ್ಲಿ ಚರ್ಚೆ ಮಾಡುತ್ತಿರುವುದು ಮಾಧ್ಯಮದಲ್ಲಿ ಬರಲಿ ಎನ್ನುವ ಉದ್ದೇಶಕ್ಕಾಗಿ ಮಾಡುತ್ತಿದ್ದೇವಾ? ಸದನದಲ್ಲಿ ಮಂತ್ರಿಗಳು ಸಹ ಇಲ್ಲ, ಅಂದರೆ ಇದು ಏನು ತೋರಿಸುತ್ತದೆ?

ಶ್ರೀ ಕೆ.ಜೆ.ಜಾರ್ಜ್(ಮಾನ್ಯ ಗೃಹಸಚಿವರು): ಮಂತ್ರಿಗಳಾಗಿ ನಾವು ಸದನದಲ್ಲಿದ್ದೇವೆ, ಮಂತ್ರಿಗಳು ಸದನದಲ್ಲಿ ಇಲ್ಲವೆಂದು ಹೇಗೆ ಹೇಳುತ್ತೀರಿ?

ಶ್ರೀ ಪಿ.ರಾಜೀವ್: ಸದನದಲ್ಲಿ ಸಕ್ಕರೆ ಮಂತ್ರಿಗಳು ಎಲ್ಲಿ ಇದ್ದಾರೆ?

(ಗೊಂದಲ)

ಶ್ರೀ ಪಿ.ರಾಜೀವ್: ಸನ್ಮಾನ್ಯ ಉಪಾಧ್ಯಕ್ಷರೆ, ಇದು ಭಾವನೆ ಏನು ತೋರಿಸುತ್ತದೆ ಎಂದರೆ, ಸರ್ಕಾರಕ್ಕೆ ಸದನ ನಡೆಸುವುದಕ್ಕೆ ಇಚ್ಛಾಶಕ್ತಿ ಇರುವುದಿಲ್ಲ. ಈ ಸರ್ಕಾರದಿಂದ ಉತ್ತರವು ಸಿದ್ಧವಾಗಿದೆ. ಉತ್ತರ ಓದುವುದಷ್ಟೇ ಬಾಕಿ ಇದೆ ಎಂದು ತೋರಿಸುತ್ತದೆ. ಹಾಗಿದ್ದರೆ ಪಕ್ಷದ ಮುಖಂಡರು ಏತಕ್ಕಾಗಿ ಮಾತನಾಡಬೇಕು. ಇದರ ಬಗ್ಗೆ ಅವರು clarification ಏನು ತೆಗೆದುಕೊಳ್ಳುತ್ತಾರೆ? ಸಿದ್ಧವಾಗಿರುವಂತಹ ಉತ್ತರವನ್ನು ಓದುವುದಕ್ಕಾಗಿ ಸದನವನ್ನು ನಡೆಸಬೇಕೇ?

ಒಬ್ಬ ಮಾನ್ಯ ಸದಸ್ಯರು: ಚರ್ಚೆಯಾಗಿರುವುದಕ್ಕೆ ಉತ್ತರವನ್ನು ಕೊಡುತ್ತಾರೆ.

ಶ್ರೀ ಪಿ.ರಾಜೀವ್: ಬದ್ಧತೆ ತೋರಿಸುತ್ತದೆ ಎಂದರೆ ಹಾಗಾದರೆ ಸದನದಲ್ಲಿ Principal Secretary ಯವರು ಎಲ್ಲಿದ್ದಾರೆ?

ಶ್ರೀ ಎ.ಮಂಜು: ಮಂತ್ರಿಗಳಿಗೆ ವಿಧಾನ ಪರಿಷತ್ತಿಗೆ ಹೋಗುವ ಕೆಲಸ ಇರುತ್ತದೆಯಲ್ಲಾ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಮೇಲುಕೋಟೆ): ಸನ್ಮಾನ್ಯ ಉಪಾಧ್ಯಕ್ಷರೆ, ಕನಿಷ್ಟ ಸಹಕಾರ ಸಚಿವರನ್ನು ಸದನಕ್ಕೆ ಕರೆಸುವ ಪ್ರಯತ್ನ ಪಡಿ. ಸದನದ ಹೊರಗಡೆ ಚಳುವಳಿಯು ನಡೆಯುತ್ತಿದೆ. ಸರ್ಕಾರವು ಬೇಕಾದಷ್ಟು ಬಾಕಿ ಕೊಡುವುದು ಇದೆ. ಸದನದಲ್ಲಿ ಗಂಭೀರವಾಗಿ ಮಾನ್ಯ ಸದಸ್ಯರು ಚರ್ಚೆ ಮಾಡುತ್ತಿದ್ದಾರೆ. ಇದು ಆಡಳಿತ ಪಕ್ಷ ಮತ್ತು ವಿರೋಧಪಕ್ಷ ಎಂದೂ ಅಲ್ಲ. ಕರ್ನಾಟಕದ ಕಬ್ಬು ಬೆಳೆಗಾರರ ಬಹಳ ಜ್ವಲಂತ ಸಮಸ್ಯೆ ಮಾನ್ಯ ಸಚಿವರು ಸದನಕ್ಕೆ ಬಂದರೆ ಬಹಳ ಅನುಕೂಲವಾಗುತ್ತದೆ. ಸದನದಲ್ಲಿ ಯಾರೂ ಮಂತ್ರಿಗಳು ಇಲ್ಲ ಎನುವಂತಹ ಪ್ರಶ್ನೆ ಅಲ್ಲ. ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಬಂದು ಕುಳಿತಿದ್ದರೆ ಒಳ್ಳೆಯದು. ದಯವಿಟ್ಟು ಮಾನ್ಯ ಸಚಿವರುಗಳನ್ನು ಸದನಕ್ಕೆ ಕರೆಸಿ.

ಶ್ರೀ ಪಿ.ರಾಜೀವ್: ಮಾನ್ಯ ಉಪಾಧ್ಯಕ್ಷರೆ, ಸದನವನ್ನು 10 ನಿಮಿಷಗಳ ಕಾಲ ಮುಂದೂಡಿ. ಸರ್ಕಾರಕ್ಕೆ ಗಂಭೀರತೆಯ ಬಗ್ಗೆ ಗೊತ್ತಾಗಲಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ(ಹೊಳೆನರಸೀಪುರ): ಮಾನ್ಯ ಉಪಾಧ್ಯಕ್ಷರೆ, front roll ನಲ್ಲಿ ಯಾರಾದರೂ ಒಬ್ಬರು Secretary ಯವರುಗಳು ಇದ್ದಾರಾ ತಾವು ನೋಡಿ.

ಶ್ರೀ ಪಿ.ಎಂ.ಅಶೋಕ್: ಈಗ ಸಕ್ಕರೆ ಮಂತ್ರಿಗಳು ಸದನಕ್ಕೆ ಬಂದರು ತಾವು ಮಾತನಾಡುವುದಕ್ಕೆ ಚಾಲೂ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: Front roll ನಲ್ಲಿ ಯಾರು ಇದ್ದಾರೆ ತಾವು ನೋಡಿ. ಅಧಿಕಾರಿಗಳು ಒಬ್ಬರೂ ಸಹ ಇರುವುದಿಲ್ಲ. ಸದನ ನಡೆಯುತ್ತಿರುವ ಬಗ್ಗೆ ಗೌರವ ಇದೆಯಾ? ಮಾನ್ಯ ಉಪಾಧ್ಯಕ್ಷರೆ ತಾವು ಈ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳಬೇಕು. ನಾವು ಸುಮ್ಮನೆ ನಾಮಾಕವಾಸ್ತೆಗೆ ಬಂದು ಮಾತನಾಡುವುಕ್ಕೆ ಇಲ್ಲಿಗೆ ಬಂದಿಲ್ಲ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಈಗ ಸದನಕ್ಕೆ ಸಹಕಾರ ಮಂತ್ರಿಗಳು ಬಂದಿದ್ದಾರೆ ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ: ಯಾರಾದರೂ Secretary ಗಳು ಬಂದಿದ್ದಾರೆಯೇ ನೋಡಿ. ಇಲ್ಲಿ ಸಹಕಾರ ಮಂತ್ರಿಗಳು ಇದ್ದು ಗುರುತು ಮಾಡಿಕೊಳ್ಳುತ್ತಾರೆಯೇ? ಅವರ ಹತ್ತಿರ pen ಏನೂ ಇಲ್ಲ.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ರೇವಣ್ಣನವರೆ, ಪೊಲೀಸ್ ಇಲಾಖೆಯವರು ಬಂದು ಕುಳಿತಿದ್ದಾರೆ ಅದು ನಿಮಗೆ ಕಾಣುತ್ತಿಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ: ವೆಂಕಟೇಶಣ್ಣನವರೆ, ಯಾರಾದರೂ ಒಬ್ಬರು Secretary ಗಳು ಇದ್ದಾರೆಯೇ? ಹೋಗಲಿ ಮಾನ್ಯ ರಾಯರೆಡ್ಡಿಯವರಿಗೆ ಬರೆದುಕೊಳ್ಳುವುದಕ್ಕೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಡಿಜಿಪಿಯವರು ಇದ್ದಾರೆ, ಕೆಂಪಯ್ಯನವರು advisor ಆಗಿ ಇದ್ದಾರೆ. ಅವರು ಸರ್ಕಾರಕ್ಕೆ advise ಮಾಡುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ: ಈಗ ನೀವೇ ಬರೆದುಕೊಳ್ಳಿ.

(ಗೊಂದಲ)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಈಗ ಸಕ್ಕರೆ ಮಂತ್ರಿಗಳು ಬಂದಿದ್ದಾರೆ ಮಾತನಾಡುವುದಕ್ಕೆ ಚಾಲೂ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಉಪಾಧ್ಯಕ್ಷರೆ ಮಾನ್ಯ ರಾಯರೆಡ್ಡಿಯವರಿಗೆ ಈ ಸದನದಲ್ಲಿ ಏನೇ ಇದ್ದರೂ ಬರೆದುಕೊಂಡು ಉತ್ತರ ಕೊಡುವ ಬಗ್ಗೆ ಒಂದು ಆದೇಶವನ್ನು ಮಾಡಿಬಿಡಿ. ಈ Secretary ಯವರುಗಳು ಸದನಕ್ಕೆ ಬರುವುದು ಬೇಡ.

ಉಪಾಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ ತಾವು ಮಾತನಾಡಿ.

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನಕ್ಕೆ ಆಗಮಿಸಿದರು)

ಶ್ರೀ ಕೆ.ಜಿ.ಬೋಪಯ್ಯ(ವಿರಾಜಪೇಟೆ): ಮಾನ್ಯ ಉಪಾಧ್ಯಕ್ಷರೆ, ನಾನು ಒಂದು Privilege Motion ಅನ್ನು move ಮಾಡುವ ಬಗ್ಗೆ notice ಕೊಟ್ಟಿದ್ದೇನೆ.

ಉಪಾಧ್ಯಕ್ಷರು: ಆಯಿತು ಮಾಡಿ.

ಶ್ರೀ ಎ.ಮಂಜು: ತಾವು boycott ಮಾಡಿ ಆಚೆಗೆ ಹೋಗಿ ಬಂದು ಈಗ Privilege Motion ಅನ್ನು move ಮಾಡುತ್ತಿದ್ದೀರಲ್ಲಾ? ಇವರುಗಳು ಆಚೆಗೆ ಹೋಗಿ ಬರುವುದಿಲ್ಲವೆಂದು ಹೇಳಿದರು. ಅವರು ಸದನಕ್ಕೆ ಬಂದಿರುವ ಬಗ್ಗೆ most welcome.

(ಗೊಂದಲ)

ಶ್ರೀ ಎ.ಮಂಜು: ಬಿಜೆಪಿಯವರೆಲ್ಲರೂ ಹೊರಗಡೆ ಹೋಗಿದ್ದರು ಮತ್ತು ಅವರೇ ಇಲ್ಲಿ ಚರ್ಚೆ ಮಾಡುತ್ತಿದ್ದರು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸಕ್ಕರೆ ಮಂತ್ರಿಗಳು ಸದನಕ್ಕೆ ಬಂದರಲ್ಲಾ ಅದಕ್ಕಾಗಿ ಇವರು ಬಂದಿದ್ದಾರೆ.

ಶ್ರೀ ಎ.ಮಂಜು: ಮಾನ್ಯ ಕುಮಾರಸ್ವಾಮಿಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಮಧ್ಯ ಮಧ್ಯ ಇವರಿಗೆಲ್ಲಾ ಏತಕ್ಕಾಗಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಿ?

8) ಹಕ್ಕು ಚ್ಯುತಿ ಮಂಡನೆ

ವಿಷಯ: ಮಡಿಕೇರಿ SP ಮೇಲೆ ಹಕ್ಕುಚ್ಯುತಿ ಮಂಡನೆ

ಶ್ರೀ ಕೆ.ಜಿ.ಬೋಪಯ್ಯ: ಸನ್ಮಾನ್ಯ ಉಪಾಧ್ಯಕ್ಷರೆ, ಮೂರು ಗಂಟೆಗೆ ಜಿಲ್ಲಾ ಪಂಚಾಯಿತಿಯ ಸಭಾಂಗಣದಲ್ಲಿ ಒಂದು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ರಾಜ್ಯ ಮಟ್ಟದ ಅಧಿಕಾರಿಗಳು ಇದ್ದರು Local DFO ಎಲ್ಲರೂ ಸಹ ಇದ್ದರು. ಆ ಸಭೆಯಲ್ಲಿ ಒಬ್ಬ Wild Life DFO ಗಂಭೀರವಾಗಿ ಚರ್ಚೆಯಾಗುತ್ತಿರುವಂತಹ ಸಂದರ್ಭದಲ್ಲಿ ನಮ್ಮ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷೆ ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ಅವರನ್ನು ನೋಡಿಕೊಂಡು ವಕ್ರವಾಗಿ ನಗಾಡುವುದು ಇದೆಲ್ಲವನ್ನೂ ಮಾಡುತ್ತಿದ್ದರು. ಇದು ಸುಮಾರು 20 ನಿಮಿಷಗಳ ಕಾಲ ನಡೆಯುತ್ತಿತ್ತು. ಈ ಬಗ್ಗೆ ನಾವು ಆಕ್ಷೇಪಣೆಯನ್ನು ಎತ್ತಿದೆವು. ಇಷ್ಟು ಗಂಭೀರವಾದ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಈ ರೀತಿಯಾಗಿ ಸಭೆಯಲ್ಲಿ ನಗಾಡುವುದು ಎಷ್ಟು ಸಮಂಜಸ ಎಂದು, ಅವರು insult ಮಾಡುವ ಹಾಗೆ ಸಭೆಯಲ್ಲಿ ನಗಾಡುತ್ತಿದ್ದರು. ಅಲ್ಲಿ ಸಾರ್ವಜನಿಕರು ಸಹ ಇದ್ದರು. ಕೆಲವರು ಅವರ ವರ್ತನೆಯ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಇದಾದ ನಂತರ ಅವರನ್ನು ಸಭೆಯಿಂದ ಹೊರಗೆ ಕಳುಹಿಸಿದರು. ನಂತರ ಸಭೆಯು ನಡೆಯಿತು. ಇದಾದ ನಂತರ ರಾತ್ರಿ 10.00 ಗಂಟೆಗೆ ಒಂದು 5 ಜನರನ್ನು ಆಯ್ಕೆ ಮಾಡಿ ಅವರ ಮೇಲೆ